

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SIHI KAHI

KANNADA DAILY MORNING

BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

RNI REG No. : KARKAN/2016/75068

Volume : 08 | Issue : 52 | Saturday 01-11-2025 | E-mail : maruti.b.hosamani76@gmail.com | Page: 4 | Price : Rs. 1/-


## ಭೂ ಮತ್ತು ಗಣಿ ಇಲಾಖೆ ಅಧಿಕಾರಿಗಳ ಎಡಬಿಡಂಗಿತನಕ್ಕೆ – ಸಾರ್ವಜನಿಕರಿಂದ ಘೇರಾವ್

**ಸಿಹಿ ಕಹಿ ಸುದ್ದಿ,**

**ಶಿರಾ :** ನಗರಕ್ಕೆ ಭೇಟಿ ನೀಡಿದ ಭೂ ಮತ್ತು ಗಣಿ ಇಲಾಖೆ ಅಧಿಕಾರಿಗಳು ತಪಾಸಣೆ ವೇಳೆ ಕೆಲವು ದೊಡ್ಡಕಂಪನಿಯ ಲಾರಿಗಳನ್ನು ತಪಾಸಣೆ ಮಾಡದೆ ಲಾರಿಯ ಮೇಲಿನ ಹೆಸರು ನೋಡಿ ಬಿಡುತ್ತಿದ್ದರು ಈ ಸಂದರ್ಭದಲ್ಲಿ ಶಿರಾ ವ್ಯಕ್ತಿಗೆ ಸೇರಿದ ಲಾರಿಯನ್ನು ತಡೆದು ತಪಾಸಣೆ ನೆಪದಲ್ಲಿ ಸಾವಿರಾರು ರೂಪಾಯಿ ದಂಡ ಹಾಕಿ ಘಟನೆಯ ನಂತರ ಸ್ಥಳೀಯರು ಅಧಿಕಾರಿಗಳುವಿರುದ್ಧಅಸಮಾಧಾನವ್ಯಕ್ತಪಡಿಸಿಸಣ್ಣ ಪ್ರಮಾಣ ಲಾರಿಗಳ ಮೇಲೆ ಕ್ರಮ ಕೈಗೊಳ್ಳುತ್ತಿದ್ದೀರಾ ದೊಡ್ಡ ಪ್ರಮಾಣದ ಲಾರಿ ಮತ್ತು ಒಂದು ಕಂಪನಿಯ ಲಾರಿಯ ಮೇಲೆ ಯಾವುದೇ ಕ್ರಮವನ್ನು ಕೈಗೊಳ್ಳದೆ ಇರುವುದು ಇಲ್ಲಿಯ ಸಾರ್ವಜನಿಕ ಅನುಮಾನ ವ್ಯಕ್ತಪಡಿಸುತ್ತಾರೆ. ಅಧಿಕಾರಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಬಂದ ವೇಳೆಯಲ್ಲಿ ಕೆಲವು ಲಾರಿಗಳನ್ನು ದಂಡ ಹಾಕಿ ಮತ್ತೆ ಕೆಲವು ಲಾರಿಗಳಿಗೆ ಬಿಟ್ಟಿರುವ ದಿಂದ ಈ ಘಟನೆ ಬೆಳಕಿಗೆ ಬಂದಿದ್ದು ಈ ನಡುವೆ ಪೊಲೀಸರು ಮಧ್ಯ ಪ್ರವೇಶ ಸಮಾಧಾನ ಪಡಿಸಿದರು ಈ ವೇಳೆ ಅಕ್ಷಯ ಕಂಪನಿಯ ಲಾರಿಗಳು ಯಾವುದೇ ನಿಯಮಗಳನ್ನು ಪಾಲಿಸದೆ ಓಡಾಟ ನಡೆಸಿದರು ಯಾವುದೇ ಕ್ರಮವನ್ನು ಅನುಸರಿಸದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ ನರೇಶ್ ಗೌಡ, ಹಾಗೂ ಟ್ರ್ಯಾಕ್ಟರ್ ಮಾಲೀಕ ಮಂಜುನಾಥ್ ಇತರರು ಅಸಮಾಧಾನ ವ್ಯಕ್ತಪಡಿಸಿದರು ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಎನ್.ರಂಗಯ್ಯ.ನಿಟ್ಟೂರು.ಗುಬ್ಬಿ**





## ಕಾಂಗ್ರೆಸ್ ಪಾಳಯದಲ್ಲಿ ಸಂಚಲನ, ಉಡುಪಿ ಇಂಟಕ್ ಘಟಕದಿಂದ ಪಕ್ಷಕ್ಕೆ ಹೊಸ ಶಕ್ತಿ – ಯುವ ನಾಯಕತ್ವಕ್ಕೆ ಮಹತ್ವ ನೀಡುತ್ತಿರುವ ರತ್ನಾಕರ ಪೂಜಾರಿ ಘೋಷಣೆ...!

**ಸಿಹಿ ಕಹಿ ಸುದ್ದಿ,**

**ಉಡುಪಿ :** ರಾಜ್ಯ ರಾಜಕಾರಣದ ಗಮನ ಸೆಳೆದಿರುವ ಸುದ್ದಿಯಲ್ಲಿ, ಉಡುಪಿ ಜಿಲ್ಲಾ ಇಂಟಕ್ (ಐಓ–ಖಿಗಅ) ಘಟಕವು ಕಾಂಗ್ರೆಸ್ ಪಕ್ಷವನ್ನು ತಳಮಟ್ಟದಿಂದ ಬಲಪಡಿಸಲು ಅನುಸರಿಸುತ್ತಿರುವ ಹೊಸ ಮತ್ತು ಆಕ್ರಮಣಕಾರಿ ಕಾರ್ಯತಂತ್ರವನ್ನು ಜಿಲ್ಲಾ ಕಾರ್ಮಿಕ ಘಟಕದ ಅಧ್ಯಕ್ಷರಾದ ರತ್ನಾಕರ ಪೂಜಾರಿ ಅವರು ಪತ್ರಿಕಾ ಹೇಳಿಕೆಯ ಮೂಲಕ ರಾಜ್ಯ ನಾಯಕರ ಗಮನಕ್ಕೆ ತಂದಿದ್ದಾರೆ.

ಪೂಜಾರಿ ಅವರ ಹೇಳಿಕೆ ರಾಜ್ಯ ಕಾಂಗ್ರೆಸ್ ನಾಯಕತ್ವದಲ್ಲಿ ಚರ್ಚೆಗೆ ಕಾರಣವಾಗಿದ್ದು, ಉಡುಪಿ ಘಟಕದ ಕಾರ್ಯವೈಖರಿ ಶ್ಲಾಘನೆಗೆ ಪಾತ್ರವಾಗಿದೆ.

**ಉಡುಪಿ ಇಂಟಕ್ನ ಐದು ಆಯಾಮಗಳ 'ಪಕ್ಷ ಬಲವರ್ಧನೆ' ಕಾರ್ಯತಂತ್ರ:–**

**ಯುವ ನೇತೃತ್ವಕ್ಕೆ ಆದ್ಯತೆ:–**

ಇಂಟಕ್ ಮೂಲಕ ಹೊಸ ಯುವ ನಾಯಕತ್ವವನ್ನು ಸೃಷ್ಟಿಸಿ, ಅವರನ್ನು ನೇರವಾಗಿ ಕಾಂಗ್ರೆಸ್ ಪಕ್ಷದ ಕೆಲಸಗಳಿಗೆ ಸಜ್ಜುಗೊಳಿಸಲಾಗುತ್ತಿದೆ. ಇದು ಭವಿಷ್ಯದ ನಾಯಕರಿಗೆ ವೇದಿಕೆ ಕಲ್ಪಿಸಿದೆ.

**ಕ್ರಿಯಾಶೀಲತೆ:–**

ಜಿಲ್ಲೆಯ ಪ್ರತಿ ಬ್ಲಾಕ್ ಅಧ್ಯಕ್ಷರ ಹುದ್ದೆಗಳಿಗೆ ಸಂಘಟನಾ ಕೌಶಲ್ಯ ಮತ್ತು ಚುರುಕುತನ ಹೊಂದಿರುವ ಯುವಕರನ್ನು ನೇಮಕ ಮಾಡಲಾಗಿದೆ. ಇದರಿಂದ ಇಂಟಕ್ ಘಟಕವು ಹಿಂದೆಂದಿಗಿಂತಲೂ ಹೆಚ್ಚು ಚಟುವಟಿಕೆಯಿಂದ ಕೆಲಸ ಮಾಡುತ್ತಿದೆ.

ಮಹಿಳಾ ಘಟಕದ ಸಂಪೂರ್ಣ ಬಲವರ್ಧನೆ:

ಮಹಿಳಾ ಘಟಕಕ್ಕೆ ಹೆಚ್ಚಿನ ಒತ್ತು



ನೀಡುವ ಮೂಲಕ ಸಂಘಟನೆಯು ಸಮಾಜದ ಎಲ್ಲ ಸ್ತರಗಳನ್ನು ತಲುಪಲು ಪ್ರಯತ್ನಿಸುತ್ತಿದೆ.

ಕಾರ್ಮಿಕರ ಸಮುದಾಯದ ಏಕೀಕರಣ: ಅಸಂಘಟಿತ ಕಾರ್ಮಿಕರ ಸಂಘಗಳು,

ಚಾಲಕರ ಸಂಘಗಳು ಸೇರಿದಂತೆ ಇಂಟೆಕ್ ಕೂಡ ಚಾಲಕ ಸಂಘ ಮತ್ತು ಅಸಂಘಟಿತ ಕಾರ್ಮಿಕ ಸಂಘ ಎರಡನ್ನು ಹೊಸದಾಗಿ ಪ್ರಾರಂಭ ಮಾಡಿದೆ.ಎಲ್ಲಾ ಕಾರ್ಮಿಕ ವಲಯವನ್ನು ಒಗ್ಗೂಡಿಸಿ ಕಾಂಗ್ರೆಸ್ನ ಮುಖ್ಯವಾಹಿನಿಗೆ ತರಲಾಗುತ್ತಿದೆ. ಇದು ಪಕ್ಷಕ್ಕೆ ಬೃಹತ್ ಕಾರ್ಮಿಕ ಸಮುದಾಯದ ಬೆಂಬಲವನ್ನು ಖಚಿತ ಪಡಿಸಲಿದೆ.

**ರತ್ನಾಕರ ಪೂಜಾರಿ ಅವರ ಬಲವಾದ ಪ್ರತಿಪಾದನೆ:–**

ಉಡುಪಿ ಜಿಲ್ಲಾ ಇಂಟಕ್ ಘಟಕದ ಈ ಸಕ್ರಿಯ ಕೆಲಸದಿಂದ ಹೊಸ ಮುಖಗಳು ಮತ್ತು ಯುವ ಜನಾಂಗ ಕಾಂಗ್ರೆಸ್ ಕಡೆಗೆ ಆಕರ್ಷಿತರಾಗುತ್ತಿದ್ದಾರೆ.

ಆದ್ದರಿಂದ,ರಾಜ್ಯಮತ್ತುಜಿಲ್ಲಾಕಾಂಗ್ರೆಸ್ ನಾಯಕರು ಇಂಟಕ್ ಘಟಕಕ್ಕೆ ಹೆಚ್ಚಿನ ಬೆಂಬಲ ಮತ್ತು ಮಾನ್ಯತೆ ನೀಡಬೇಕು. ಈ ಬೆಂಬಲದಿಂದ ಉಡುಪಿ ಜಿಲ್ಲೆಯು ಪಕ್ಷಕ್ಕೆ ಮಹತ್ತರವಾದ ಬಲವನ್ನು ತಂದುಕೊಡುವ ಸಾಮರ್ಥ್ಯ ಹೊಂದಿದೆ ಎಂದು ಪೂಜಾರಿ ಅವರು ಬಲವಾಗಿ ಪ್ರತಿಪಾದಿಸಿದ್ದಾರೆ.

ಈ ಬೆಳವಣಿಗೆಯಿಂದ ರಾಜ್ಯ ಕಾಂಗ್ರೆಸ್ ಉಡುಪಿ ಘಟಕದ ಮೇಲೆ ಇಡೀ ರಾಜ್ಯದ ನಾಯಕರ ಗಮನ ನೆಟ್ಟಿದೆ.

**ವರದಿ :**
**ಆರತಿ. ಗಿಳಿಯಾರು.**
**ಉಡುಪಿ**

## ಗುಣಮಟ್ಟದ ಫಲಿತಾಂಶಕ್ಕೆ ಹೆಚ್ಚು ಒತ್ತು ನೀಡಿ

### ಪಿಯು ಫಲಿತಾಂಶ ಸುಧಾರಣೆಗೆ ಉಪನ್ಯಾಸಕರು ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿ

**ರಬಕವಿ–ಬನಹಟ್ಟಿ :** ಗುಣಮಟ್ಟದ ಫಲಿತಾಂಶಕ್ಕೆ ನಾವು ಹೆಚ್ಚು ಒತ್ತು ನೀಡಬೇಕಾಗಿದೆ.

ವಿದ್ಯಾರ್ಥಿಗಳ ಉತ್ತಮ ಫಲಿತಾಂಶದಿಂದ ಶಿಕ್ಷಣ ಸಂಸ್ಥೆಗಳು ಮತ್ತು ಸಮಾಜದ ಅಭಿವೃದ್ಧಿಯಾಗುತ್ತದೆ. ಅದಕ್ಕಾಗಿ ಉಪನ್ಯಾಸಕರು ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳಂತೆ ಕಾಣುವ ಮೂಲಕ ಫಲಿತಾಂಶ ಸುಧಾರಣೆಗಾಗಿ ಕ್ರಮ ತೆಗೆದುಕೊಳ್ಳಬೇಕು ಎಂದು ಬಾಗಲಕೋಟೆಯ ಶಾಲಾ ಶಿಕ್ಷಣ ಇಲಾಖೆ(ಪದವಿಪೂರ್ವ)ಉಪನಿರ್ದೇಶಕ ಪುಂಡಲೀಕ ಕಾಂಬಳೆ ತಿಳಿಸಿದರು.

ಅವರು ಶನಿವಾರ ಇಲ್ಲಿನ ಎಸ್ ಟಿ ಸಿ ಕಾಲೇಜು ಸಭಾ ಭವನದಲ್ಲಿ ದ್ವಿತೀಯ ಪಿಯುಸಿ ಫಲಿತಾಂಶ ಸುಧಾರಣಾ ಸಭೆಯಲ್ಲಿ ರಬಕವಿ ಬನಹಟ್ಟಿ ತಾಲ್ಲೂಕಿನ ಪದವಿಪೂರ್ವ ಕಾಲೇಜುಗಳ ಪ್ರಾಚಾರ್ಯರ ಮತ್ತು ಉಪನ್ಯಾಸಕರ ಸಭೆಯಲ್ಲಿ ಮಾತನಾಡಿದರು.

ಮುಂಬರುವ ದಿನಗಳಲ್ಲಿ ಜಿಲ್ಲೆಯ ಪಿಯುಸಿ ಫಲಿತಾಂಶದ ಸುಧಾರಣೆಗಾಗಿ



ಪ್ರತಿಯೊಬ್ಬರ ಸಹಕಾರ ಅಗತ್ಯವಾಗಿದೆ.

ಉತ್ತಮ ಫಲಿತಾಂಶವನ್ನು ನೀಡುವ ದಿಶೆಯಲ್ಲಿ ಉಪನ್ಯಾಸಕರು ಮುಂದಿನ ಮೂರುತಿಂಗಳುಗಳಕಾಲಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಬೇಕು.

ಸರ್ಕಾರ ಉಪನ್ಯಾಸಕರಿಗೆ ಅನೇಕ ಸೌಲಭ್ಯಗಳನ್ನು ನೀಡುತ್ತಿದೆ.

ವಿದ್ಯಾರ್ಥಿಗಳೇ ನಮ್ಮ ಅನ್ನದಾತರು. ಅದಕ್ಕಾಗಿ ಅವರ ಬಗ್ಗೆ ನಾವು ವಿಶೇಷ ಕಾಳ–ಜಿಯನ್ನು ತೆಗೆದುಕೊಳ್ಳಬೇಕು ಎಂದರು.

ಉಪನ್ಯಾಸಕರು ವಿದ್ಯಾರ್ಥಿಗಳಿಗೆ ಹೊಸ ಪಠ್ಯಕ್ರಮಗಳ ಬಗ್ಗೆ, ಹೊಸ ಪ್ರಶ್ನೆ ಪತ್ರಿಕೆಗಳ ಬಗ್ಗೆ ಸರಿಯಾಗಿ ತಿಳಿ ಹೇಳಬೇಕು. ಮುಖ್ಯವಾಗಿ ಉಪನ್ಯಾಸಕರು ವಿದ್ಯಾರ್ಥಿಗಳ ಗುಣಮಟ್ಟವನ್ನು ಅರಿತು ಕೊಳ್ಳಬೇಕು. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಬಗ್ಗೆ ಹೆಚ್ಚಿನ ಗಮನ ನೀಡಬೇಕು.

ಅವರಲ್ಲಿರುವ ಸಮಸ್ಯೆಗಳ ಬಗ್ಗೆ ನಾವು ತಿಳಿದುಕೊಳ್ಳುವುದು ಅಗತ್ಯವಾಗಿದೆ. ಮುಂದಿನ ದಿನಗಳಲ್ಲಿ ಪ್ರತಿಯೊಂದು ವಿಷಯವಾರು ಪ್ರಗತಿಯ ಬಗ್ಗೆಯೂ ಗಮನ ನೀಡಲಾಗುವುದು. ಉತ್ತಮ ಫಲಿತಾಂಶವನ್ನುನೀಡುವಶಿಕ್ಷಣಸಂಸ್ಥೆಗಳನ್ನು ಇಲಾಖೆಯಿಂದ ಗೌರವಿಸಲಾಗುವುದು. ಜಿಲ್ಲೆಯಲ್ಲಿ ಒಟ್ಟು 150 ಕ್ಕೂ ಹೆಚ್ಚು ಪದವಿ ಪೂರ್ವ ಕಾಲೇಜುಗಳಿವೆ.

ಫಲಿತಾಂಶದ ಸುಧಾರಣೆಗಾಗಿ ತಂಡವಾಗಿ ಶ್ರಮಿಸಿರಿ. ಮುಂದಿನ ದಿನಗಳಲ್ಲಿ ಪ್ರತಿಯೊಂದು ತಾಲ್ಲೂಕು ಕೇಂದ್ರಗಳಲ್ಲಿ ಫಲಿತಾಂಶ ಸುಧಾರಣಾ ಸಭೆಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಪುಂಡಲೀಕ ಕಾಂಬಳೆ ತಿಳಿಸಿದರು.

ಫಲಿತಾಂಶ ಸುಧಾರಣಾ ಸಮಿತಿಯ ಶರತ್ಚಂದ್ರ ಜಂಬಗಿ, ಪ್ರಾಚಾರ್ಯರಾದ ಬಿ. ಆರ್. ಗೊಡ್ಡಾಳೆ, ಬಸವರಾಜ ಕೊಣ್ಣೂರ, ಚಂದ್ರಪ್ರಭಾ ಬಾಗಲಕೋಟ, ಶ್ರೀಶೈಲ ಕುಂಬಾರ, ಬಿ. ಎಸ್. ಕಾಂಬಳೆ, ಬಿ. ನಾಗರಾಜ, ಬಿ. ಬಿ. ಕುದರಿಮನಿ, ಎಲ್. ಬಿ. ತುಪ್ಪದ, ಶಿವಪ್ಪ ಎಲ್. ಜೋಡಟ್ಟಿ, ಎಂ. ಆರ್. ಹಿರೇಮಠ, ಎಫ್. ಬಿ. ತಳವಾರ, ಎಸ್. ಎಸ್. ಖಾನಾಪುರ, ಎಂ. ಎ. ಗುಟ್ಲಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

## ಹಿರೇಕೆರೂರಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬೀ ಸಿ ಟ್ರಸ್ಟ್ ರಿಜಿಸ್ಟರ್





**ಹಿರೇಕೆರೂರ :** ಯೋಜನಾ ಕಚೇರಿ ವ್ಯಾಪ್ತಿಯಲ್ಲಿ ಬರುವ ಹಿರೆಮೊರಬ ವಲಯದ ಶಿವಾಜಿನಗರ ಕಾರ್ಯಕ್ಷೇತ್ರದ ಮಂಜುಶ್ರೀ ಜ್ಞಾನ ವಿಕಾಸ ಕೇಂದ್ರದಲ್ಲಿ ಸೀರೆಗುಚ್ಚ ತರಬೇತಿ ಕಾರ್ಯಕ್ರಮ ಆಯೋಜನೆ ಮಾಡಲಾಗಿತು.

ಕಾರ್ಯಕ್ರಮವನ್ನು ಲಯನ್ಸ್ ಹೈಸ್ಕೂಲ್ ಶಿಕ್ಷಕರು ಮಾಲತೇಶ್ ಉದ್ಘಾಟಿಸಿದರು . ಮಹಿಳೆಯರು ಜ್ಞಾನ ವಿಕಾಸ ಕೇಂದ್ರದಲ್ಲಿ ಸೇರಿದ ನಂತರ ಸ್ವ ಉದ್ಯೋಗ ಮಾಡುವ ಉದ್ದೇಶವನ್ನು ಇಟ್ಟುಕೊಂಡು ಸೀರೆ ಗುಚ್ಚ ತರಬೇತಿಯನು ಹಮ್ಮಿಕೊಳ್ಳಲಾಗಿದೆ ತರಬೇತಿಯ ಪ್ರಯೋಜನ ವನ್ನು ಎಲ್ಲರೂ ಪಡೆದುಕೊಳ್ಳಿ ಎಂದರು

ಊರಿನ ಮುಖಂಡರು ಪುಟ್ಟಣ್ಣೇಗೌಡ

ತರಬೇತಿ ಶಿಕ್ಷಕರು ಅಕ್ಷತಾ

ಒಕ್ಕೂಟದ ಅಧ್ಯಕ್ಷರು

ವಲಯದ ಮೇಲ್ವಿಚಾರಕರು ಕೃಷ್ಣಮೂರ್ತಿ

ಜ್ಞಾನಿ ವಿಕಾಸ ಸಮನ್ವಯಾಧಿಕಾರಿ ಪಾರ್ವತಿ

ಸೇವಾ ಪ್ರತಿನಿಧಿ ಜಯಲಕ್ಷ್ಮಿ

ಕೇಂದ್ರದದ ಎಲ್ಲಾ ಸದಸ್ಯರು ಭಾಗವಹಿಸಿದ್ದರು ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ನಡೆಯಿತು.

## ಜಮಖಂಡಿ ತಾಲೂಕು ಅನುದಾನಿತ ಶಾಲೆಗಳ ಶಿಕ್ಷಕರ ದಿನಾಚರಣೆ ಮಕ್ಕಳ ಬದುಕು ಕಟ್ಟಿಕೊಡುವುದು ಶಿಕ್ಷಕರ ಕರ್ತವ್ಯ–ಡಿಡಿಪಿಐ

**ತೇರದಾಳ :** ಗುರು ಮತ್ತು ಶಿಷ್ಯರ ಸಂಬಂಧ ಬಹಳಷ್ಟು ಶ್ರೇಷ್ಠವಾದದ್ದು, ಶಿಕ್ಷಕ ತನ್ನಲ್ಲಿನ ಶ್ರೇಷ್ಠತೆಯನ್ನು ಮಕ್ಕಳಿಗೆ ಧಾರೆ ಎರೆದರೆ ಮಕ್ಕಳು ಅದನ್ನು ನೈವೇದ್ಯದಂತೆ ಸ್ವೀಕ–ರಿಸುತ್ತಾರೆ. ಆದ್ದರಿಂದ ಮಕ್ಕಳ ಬದುಕು ಕಟ್ಟಿಕೊಡುವ ಕಾರ್ಯ ಶಿಕ್ಷಕನ ಕರ್ತವ್ಯವಾಗಿದೆ ಎಂದು ಡಿಡಿಪಿಐ ಅಜಿತ ಮನ್ನಿಕೇರಿ ಹೇಳಿದರು.

ಇಲ್ಲಿನ ಜೆ.ವಿ. ಮಂಡಳ ಸಭಾ ಭವನದಲ್ಲಿ ಜಮಖಂಡಿ ತಾಲೂಕು ಅನುದಾನಿತ ಶಾಲೆಗಳ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳು ಕೇಳುವ ಪ್ರಶ್ನೆಗಳನ್ನು ಶಿಕ್ಷಕರು ವಿನಯದಿಂದ ಆಲಿಸಿ ನಯನವಾಗಿ ಉತ್ತ–ರಿಸಿದರೆ ಮಕ್ಕಳಲ್ಲಿ ಕಲಿಕೆಯ ಹಂಬಲ ಹೆಚ್ಚಾಗುವುದರ ಜತೆಗೆ ಶಿಕ್ಷಕರ ಮೇಲಿನ ಗೌರವ ಕೂಡ ಇಮ್ಮಡಿಗೊಳ್ಳುತ್ತದೆ. ಶಿಕ್ಷಕರು ಸಮಾಜವನ್ನು ಮುನ್ನಡೆಸಿಕೊಂಡು ಹೋಗುವ ಸಾಧಕರು ಎಂಬುದು ಹೆಗ್ಗಳಿಕೆಯಾಗಿದೆ ಎಂದು ಬಣ್ಣಿಸಿದರು.

ಬಿಇಓ ಎ. ಕೆ. ಬಸಣ್ಣವರ ಮಾತನಾಡಿ, ಅಜ್ಞಾನ, ಬಡತನ ಮತ್ತು ಹಸಿವು ಮನುಷ್ಯನ





ಶತ್ರುಗಳು ಎಂದರೆ ತಪ್ಪಾಗಲಾರದು. ಶಿಕ್ಷಣ ಸಂಸ್ಥೆಗಳಿಂದ ಮಾತ್ರ ಈ ಮೂರೂ ಶತ್ರುಗಳನ್ನು ಹೋಗಲಾಡಿಸಲು ಸಾಧ್ಯ. ಅಂತಹ ಮಹತ್ವದ ಕೆಲಸವನ್ನು ಜೆವಿ ಮಂಡಳ ಮಾಡುವ ಮೂಲಕ ಗ್ರಾಮೀಣ ಪ್ರತಿಭೆಗಳಿಗೆ ಬಲು ದೊಡ್ಡ ಆಸರೆಯಾಗಿದೆ ಎಂದು ಹೇಳಿದರು. ಹಿಪ್ಪರಗಿಯ ಸಿದ್ಧಾರೂಢ ಶರಣರು ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ನಡುವಿನ ಸಂಬಂಧದ ಕುರಿತು ವಿಶೇಷ ಉಪನ್ಯಾಸ ನೀಡಿದರು. ಸಾನಿಧ್ಯ ವಹಿಸಿದ್ದ ಕೊಲ್ಲಾಪುರ–ನಾಂದಣಿ ತೇರದಾಳ ಶಾಖಾ ಮಠದ ಜಿನಸೇನ ಭಟ್ಟಾರಕ ಪಟ್ಟಾಚಾರ್ಯರು ಆಶೀರ್ವಚನ ನೀಡಿದರು.

ಅನುದಾನಿತ ಶಾಲೆಗಳ ಸಂಘದ ತಾಲೂಕು ಅಧ್ಯಕ್ಷ ಈರಣ್ಣ ಲಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿ, ಅನುದಾನಿತ ಶಾಲೆಗಳ ಶಿಕ್ಷಕರ ಸಮಸ್ಯೆ ಮತ್ತು ಬೇಡಿಕೆಗಳ ಕುರಿತು ಸರಕಾರಕ್ಕೆ ವರದಿ ಸಲ್ಲಿಸುವಂತೆ ಡಿಡಿಪಿಐ ಅವರಿಗೆ ಮನವಿ ಮಾಡಿದರು.

ಪ್ರಶಸ್ತಿ ಪ್ರದಾನ: ಜಮಖಂಡಿ ತಾಲೂಕು ಅನುದಾನಿತ ಶಾಲೆಗಳ ಶಿಕ್ಷಕರ ಸಂಘದ ವತಿಯಿಂದ ಸ್ಥಳೀಯ ಜಿನಸೇನಾಚಾರ್ಯ ಶಾಲೆಯ ವಿಜಯಕುಮಾರ ಎಳಗೂಡ ಹಾಗೂ ಬನಹಟ್ಟಿ ಮಲ್ಲಿಕಾರ್ಜುನ ಅನುದಾನಿತ ಶಾಲೆಯ ರಾಜೇಶ್ವರಿ ಕಾಡದೇವರ ಅವರಿಗೆ ಆದರ್ಶ ಶಿಕ್ಷಕ/ಶಿಕ್ಷಕಿ, ರಬಕವಿ ಗುರುದೇವ ಅನುದಾನಿತ ಶಾಲೆಯ ರಮೇಶ ಅಚನೂರ ಅವರಿಗೆ ಉತ್ತಮ ಆಡಳಿತಗಾರ ಮತ್ತು ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ವಿಜೇತ ನೇಮಿನಾಥ ಜಮಖಂಡಿ ಅವರಿಗೆ ವಿಶೇಷ ಸನ್ಮಾನ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು.

ಸಂಸ್ಥೆ ಅಧ್ಯಕ್ಷ ಟಿ. ಸಿ. ಪಡಸಲಗಿ ಅಧ್ಯಕ್ಷತೆ ವಹಿಸಿದ್ದರು. ಡಿ. ಆರ್. ಪಾಟೀಲ, ಡಾ. ಜೆ. ಬಿ. ಆಲಗೂರ, ಪ್ರವೀಣ ನಾಡಗೌಡ, ಎಂ. ಪಿ. ಅಸ್ಕಿ, ಪದ್ಮರಾಜ ಹಟ್ಟಿ, ಕಿರಣ ಕುಳ್ಳಿ, ಪಿ. ಡಿ. ಬದನಿಕಾಯಿ, ಶಿಕ್ಷಣ ಇಲಾಖೆಯ ಸಿ. ಎಸ್. ಕಲ್ಯಾಣಿ, ಎಸ್. ಜಿ. ವಿಜಾಪುರ, ಬಿ. ಎಂ. ಹಳೇಮನಿ, ಶಿಕ್ಷಕರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಎಚ್. ಎಂ. ಪಾರಸನಳ್ಳಿ, ಜಿಲ್ಲಾಧ್ಯಕ್ಷ, ಎಂ. ಎಲ್. ಬಾಗೇವಾಡಿ, ಮಹೇಶ ಸೋರಗಾಂವಿ ಮತ್ತಿತರರು ಪಾಲ್ಗೊಂಡಿದ್ದರು.

## ಶಾಸಕ ಎಸ್ ಟಿ ಸೋಮಶೇಖರ ಅಭಿಮಾನಿಗಳ ಬಳಗದಿಂದ ಸಾಹಿತಿ ಡಾ. ಸತ್ಯಮೂರ್ತಿ ಗೂಗಿ ಅವರಿಗೆ ಗೌರವ ಸತ್ಕಾರ

ಬೆಂಗಳೂರಿನ ಕೆಂಗೇರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ವಿಜಯಲಕ್ಷ್ಮಿ ಚಾರಿಟಬಲ್ ಟ್ರಸ್ಟ್ ಹಾಗೂ ಎಸ್. ಟಿ ಸೋಮಶೇಖರ್ ಅಭಿಮಾನಿ ಬಳಗ ಆಯೋಜಿಸಿದ್ದ ಕರ್ನಾಟಕ ರತ್ನ ಡಾ. ವಿಷ್ಣುವರ್ಧನ್ ರವರ 75ನೇ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಕವಿ ಹಾಗೂ ಸಾಹಿತಿ ಡಾ. ಸತ್ಯಮೂರ್ತಿ ಗೂಗಿ ಅವರನ್ನು ಚಿತ್ರನಟಿ ಮಧುಬಾಲ ಸತ್ಕರಿಸಿ ಗೌರವಿಸಿದ್ದರು.

ಈ ಸಂದರ್ಭದಲ್ಲಿ ಸಾಧಕರಾದ ಅಪೇಕ್ಷ ಮಂಜುನಾಥ್,ರಾಜೇಗೌಡ,ಶ್ರೀಧರ್,ಹುಸೇನ್ ಸಾಬ್ ಹಾಗೂ ಮಹಿಳಾ ಸಾಧಕೀಯರಾದ ರೇಷ್ಮಾ ಬಾನು, ಅನಿತಾ ಗೌಡ ಹಾಗೂ ಸುಜಾತ ಉಪಸ್ಥಿತರಿದ್ದರು.



# ವೀರರಾಣಿ ಚೆನ್ನಮ್ಮಳ ಆದರ್ಶ ಅಳವಡಿಸಿಕೊಳ್ಳಿ



**ಜಮಖಂಡಿ :** ಬ್ರಿಟಿಷರ ಪಾಲಿನ ಸಿಂಹಸ್ವಪ್ನ, ಕನ್ನಡದ ಕೆಚ್ಚೆದೆಯ ನಾರಿ, ಕಿತ್ತೂರ ಚೆನ್ನಮ್ಮ ರಾಣಿಯ ಆದ-ರ್ಶವನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕು ಎಂದು ಮುಖ್ಯ ಶಿಕ್ಷಕ ನಾರಾಯಣ ಶಾಸ್ತ್ರಿ ಹೇಳಿದರು.

ತಾಲೂಕಿನ ಕುಂಬಾರಹಳ್ಳ ಸರಕಾರಿ ಪ್ರೌಢ ಶಾಲೆಯಲ್ಲಿ ಜರುಗಿದ ರಾಣಿ ಚೆನ್ನಮ್ಮ ಜಯಂತಿ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇಂದು ಪ್ರತಿಯೊಬ್ಬರಿಗೂ ಚೆನ್ನಮ್ಮಳ ದೇಶಭಕ್ತಿ ಆದರ್ಶವಾಗಬೇಕಾಗಿದೆ.

ದೇಶವನ್ನು ಕಾಪಾಡಿದ ಮಹಾತ್ಮರ ಜೀವನಗಳು ಆದರ್ಶಮಯವಾಗಿವೆ. ಚೆನ್ನಮ್ಮಳು ರಾಜಕೀಯ ಮುತ್ಸದ್ಧಿಯಾಗಿದ್ದರು.

ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ಬ್ರಿಟಿಷರ ನೀತಿ ವಿರುದ್ಧ ರಣ ಕಹಳೆ ಮೊಳಗಿಸಿದ್ದರು.

ಶಿಕ್ಷಕ ಸಂಗನಬಸವ ಉಟಗಿ ಮಾತನಾಡಿ, ರಾಣಿ ಚೆನ್ನಮ್ಮಳ ಧೈರ್ಯ, ಶೌರ್ಯವನ್ನು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ರಾಣಿ ಚೆನ್ನಮ್ಮ ನಮಗೆಲ್ಲ ಮಾದರಿ ಆಗಿದ್ದಾರೆ ಎಂದರು.

ವೇದಿಕೆಯಲ್ಲಿ ಶಿಕ್ಷಕರಾದ ಸವಿತಾ ಬೆನಕಟ್ಟಿ, ಸಂಸು ಝುಂಬುರೆ, ಬಾಹುಬಲಿ ಮುತ್ತೂರ, ಚಂದ್ರಕಾಂತ ಪೋಲಿಸ, ಆಸೀಫಾಭಾನು ಮೋಮಿನ್, ಶಕುಂತಲಾ ಬಿರಾದಾರ, ಶಾರದಾ ಮಠ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಭಾರತ 'ಜಾಗತಿಕ ಬೆಳವಣಿಗೆಯ ಎಂಜಿನ್'




**ಜಮಖಂಡಿ :** ಎಲ್ಲದರಲ್ಲೂ ಸ್ವಾವಲಂಬನೆ ಹೊಂದಿರುವ ಯಾವುದೇ ರಾಷ್ಟ್ರ ಜಗತ್ತಿನಲ್ಲಿಲ್ಲ. ಎಲ್ಲ ರಾಷ್ಟ್ರಗಳಿಗೂ ಆಮದು-ರಫ್ತು ಅನಿವಾರ್ಯ ಪ್ರಕ್ರಿಯೆ. ಆ ದಿಶೆಯಲ್ಲಿ ಜಾಗತಿಕ ಬೆಳವಣಿಗೆಯ ಎಂಜಿನ್ ಆಗಿ ಭಾರತ ಹೊರಹೊಮ್ಮಿದೆ ಎಂದು ಅರ್ಥಶಾಸ್ತ್ರ ಉಪನ್ಯಾಸಕ ಎಸ್. ಆರ್. ಗಣಿ ಹೇಳಿದರು.

ಇಲ್ಲಿನ ವಿಜಯಪುರ ರಸ್ತೆ ಪಕ್ಕದ ರೋಟರಿ ಭವನದಲ್ಲಿ ಶುಕ್ರವಾರ ಸಂಜೆ ಜಮಖಂಡಿಯ ರೋಟರಿ ಸಂಸ್ಥೆ ಆಯೋಜಿಸಿದ್ದ ವಾರದ ಸಭೆಯ ಮುಖ್ಯ ಅತಿಥಿ-ಯಾಗಿ 'ಪ್ರಚಲಿತ ಆರ್ಥಿಕತೆಯ ವಿದ್ಯಮಾನಗಳು' ಕುರಿತು ಅವರು ವಿಶೇಷ ಉಪನ್ಯಾಸ ನೀಡಿದರು.

ಮೇಕ್ ಇನ್ ಇಂಡಿಯಾ, ಸ್ಟಾರ್ಟ್‌ಅಪ್, ಡಿಜಿಟಲ್ ಇಂಡಿಯಾದಂತಹ ಯೋಜನೆಗಳಿಂದ ಭಾರತದಲ್ಲಿ ಉದ್ಯೋಗಾವಕಾಶಗಳು ಹೆಚ್ಚುತ್ತಿವೆ.

ಬದಲಾವಣೆ ಮತ್ತು ಬೆಳವಣಿಗೆಯ ವೇಗ ಶೇ 103 ರಷ್ಟು ಹೆಚ್ಚಾಗಿದೆ. 2047 ರ ವೇಳೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಪಟ್ಟಿಗೆ ಸೇರುವ ಗುರಿ ಹೊಂದಿದೆ ಎಂದರು.

ಭಾರತ ದೇಶದಲ್ಲಿ 5.27 ಲಕ್ಷ ಹಳ್ಳಿಗಳಿವೆ. ಹಳ್ಳಿಗಳಿಗೆ ವಿದ್ಯುಚ್ಛಕ್ತಿ, ನೀರಾವರಿ, ರಸ್ತೆ, ಸಾರಿಗೆ ವ್ಯವಸ್ಥೆ, ರಸಗೊಬ್ಬರ, ಬಿಜೋಪಚಾರ ಇತ್ಯಾದಿ ಮೂಲ ಸೌಕರ್ಯಗಳನ್ನು ಹೆಚ್ಚಿನ ಆದ್ಯತೆಯ ಮೇಲೆ ಒದಗಿಸಬೇಕಾದ ಅಗತ್ಯವಿದೆ. ನಿರುದ್ಯೋಗ, ಅತಿಯಾದ ವಿದೇಶಿ ಅವಲಂಬನೆಯಂತಹ ಸವಾಲುಗಳನ್ನು ಸಮರ್ಥವಾಗಿ ಎದುರಿಸಬೇಕಾದ ಅನಿವಾರ್ಯತೆ ಇದೆ ಎಂದರು.

ಜಮಖಂಡಿ ರೋಟರಿ ಸಂಸ್ಥೆಯ ಅಧ್ಯಕ್ಷ ರಾಜಶೇಖರ ಕೋವಳ್ಳಿ ಸ್ವಾಗತಿಸಿದರು. ಮಲ್ಲಪ್ಪ ಬುಜರುಕ ರೋಟರಿ ಸಂಸ್ಥೆಯ 'ದಿ ಫೋರ್ ವೇ ಟೆಸ್ಟ್' ಓದಿದರು. ಪ್ರವೀಣ ಝೂಡ ಅತಿಥಿಗಳನ್ನು ಪರಿಚಯಿಸಿದರು. ಕಾರ್ಯದರ್ಶಿ ಎಂ. ಎಚ್. ಕಡ್ಲಿಮಟ್ಟಿ ವಂದಿಸಿದರು. ಆರಂಭದಲ್ಲಿ ಜಾಗತಿಕ ಶಾಂತಿಗಾಗಿ ಒಂದು ನಿಮಿಷ ಮೌನ ಆಚರಿಸಲಾಯಿತು.

# ದಲಿತರನ್ನು ಒಕ್ಕಲೆಬ್ಬಿಸದಂತೆ ಒತ್ತಾಯ



**ಕುಷ್ಟಗಿ :** ತಾಲ್ಲೂಕಿನ ನಿಲೋಗಲ್ ಮತ್ತು ಅಚನೂರು ಸೀಮಾಂತರದಲ್ಲಿ ಸರ್ಕಾರಿ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವ ದಲಿತ ಇತರೆ ಬಡ ಕುಟುಂಬಗಳನ್ನು ಒಕ್ಕಲೆಬ್ಬಿಸುವುದನ್ನುವಿರೋಧಿಸಿಮತ್ತುಚನ್ನಮ್ಮವಸತಿ ಶಾಲೆ ಹಾಗೂ ಉಣ್ಣೆ ನಿಗಮದ ಕಟ್ಟಡ ಕಾಮಗಾರಿ ಸ್ಥಗಿತಗೊಳಿಸುವಂತೆ ಒತ್ತಾಯಿಸಿ ದಲಿತ, ರೈತ ಮತ್ತು ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಮತ್ತು ಸಾಗುವಳಿ ರೈತರು ತಹಶೀಲ್ದಾರ್ ಕಚೇರಿ ಬಳಿ ಅನಿರ್ದಿಷ್ಟ ಧರಣಿ ಆರಂಭಿಸಿದ್ದಾರೆ.

ಈ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಮೂರು ತಿಂಗಳ ಹಿಂದೆ ಇದೇ ಸಂಘಟನೆಗಳ ಪ್ರತಿನಿಧಿಗಳು ಧರಣಿ ನಡೆಸಿದ್ದರು.

ಅದರೆ ಬೇಡಿಕೆಗೆ ಸ್ಪಂದಿಸದೆ ತಾಲ್ಲೂಕು ಆಡಳಿತ ಮತ್ತು ಜಿಲ್ಲಾಡಳಿತದ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಆರೋಪಿಸಿ ಗುರುವಾರದಿಂದ ಪುನಃ ಧರಣಿ ಆರಂಭಿಸಿದ್ದಾರೆ. ಆದರೆ ಈ ಧರಣಿ ನಡೆಸುತ್ತಿರುವ ಕುರಿತು ತಹಶೀಲ್ದಾರ್ ಅವರು ಜಿಲ್ಲಾಧಿಕಾರಿಗೆ ಯಾವುದೇ ಮಾಹಿತಿ ನೀಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಮುಖರು, 'ಕಳೆದ ನಾಲ್ಕು ದಶಕಗಳಿಂದಲೂ ದೇವದಾಸಿಯರು, ದಲಿತ, ಉಪ್ಪಾರ ಸಮುದಾಯದ ಅನೇಕ ಕುಟುಂಬಗಳು ಸರ್ಕಾರಿ ಗಾಯರಾಣಾ ಭೂಮಿಯಲ್ಲಿ ಸಾಗುವಳಿ ಮಾಡುತ್ತ ಬಂದಿದ್ದಾರೆ.

ಅದೇ ರೀತಿ ನಿಲೋಗಲ್, ಅಚನೂರು ಸೀಮಾಂತರದ ಸರ್ಕಾರದ ಜಮೀನಿನಲ್ಲಿಯೇ ಮೇಲ್ವರ್ಗದವರು, ಶ್ರೀಮಂತರು, ನಿವೃತ್ತ ಕೆಬಿಜೆಎನ್‌ಎಲ್ ಎಂಜಿನಿಯರ್ ಸೇರಿದಂತೆ ಶೇ 80 ರಷ್ಟು ಇತ-ರೆ ಪ್ರಭಾವಿಗಳು, ರಾಜಕೀಯ ವ್ಯಕ್ತಿಗಳೇ ಸರ್ಕಾರಿ ಜಮೀನಿನಲ್ಲಿ ಅಕ್ರಮ ಸಾಗುವಳಿ ಮಾಡುತ್ತಿದ್ದಾರೆ. ಆದರೆ ಪ್ರಭಾವಿಗಳನ್ನು ಹೊರತುಪಡಿಸಿ ಬಡ ಮತ್ತು ದಮನಿತ ಸಮುದಾಯಗಳನ್ನು ಮಾತ್ರ ಅಧಿಕಾರಿಗಳು ಒಕ್ಕಲೆಬ್ಬಿಸುವ ಕುತಂತ್ರ ನಡೆಸುವ ಮೂಲಕ ಅನ್ಯಾಯ ಎಸಗುತ್ತಿದ್ದಾರೆ' ಎಂದು ಆರೋಪಿಸಿದರು.

ಸಾಗುವಳಿ ಪ್ರದೇಶದಲ್ಲಿಯೇ ಕಿತ್ತೂರರಾಣಿ ಚನ್ನಮ್ಮ ವಸತಿ ಶಾಲೆ ಕಟ್ಟಡ ಹಾಗೂ ಉಣ್ಣೆ ನಿಗಮದ ನಾರಿ ತಳಿ ಕುರಿ ಸಂವರ್ಧನೆ ಕೇಂದ್ರದ ಕಟ್ಟಡ ನಿರ್ಮಿಸಲು ಸರ್ಕಾರ ಉದ್ದೇಶಿಸಿದೆ.

ಆದರೆ ದಲಿತರು ಸಾಗುವಳಿ ಮಾಡುತ್ತಿರುವ ಜಮೀನು ಹೊರತುಪಡಿಸಿ ಉಳಿದ ಕಡೆ ಸೂಕ್ತ ಸರ್ಕಾರಿ ಜಮೀನು ಇದ್ದರೂ ಅದನ್ನು ಬಿಟ್ಟು ಮೇಲ್ವರ್ಗದವರ ಮತ್ತು ರಾಜಕೀಯ ವ್ಯಕ್ತಿಗಳ ಒತ್ತಡಕ್ಕೆ ಮಣಿದು ದಲಿತ ಕುಟುಂಬಗಳು ಸಾಗುವಳಿ ಮಾಡುತ್ತಿರುವ ಪ್ರದೇಶದಲ್ಲಿಯೇ ಈ ಕಟ್ಟಡಗಳ ನಿರ್ಮಾಣಕ್ಕೆ ಅಧಿಕಾರಿಗಳು ಮುಂದಾಗಿರುವುದು ಅನ್ಯಾಯದ ಪರಮಾವಧಿಯಾಗಿದೆ' ಎಂದರು.

ಹಿಂದೆ ಧರಣಿ ನಡೆಸಿದಾಗ ಮಾತುಕತೆಗೆ ಕರೆದ ಜಿಲ್ಲಾಧಿಕಾರಿಗಳು ನಂತರ ದಲಿತ ಸಮುದಾಯಗಳ ಬೇಡಿಕೆಗೆ ಸ್ಪಂದಿಸದೆ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಿದ್ದಾರೆ.

ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿ-ದ್ದ ಶಾಸಕ ದೊಡ್ಡನಗೌಡ ಪಾಟೀಲ ಬಡವರ ಪರ ನಿಲ್ಲದೆ ಪ್ರಭಾವಿಗಳ ಮಾತಿಗೆ ಮಣೆಹಾಕುತ್ತಿರುವುದು ಸರಿಯಲ್ಲ.

ಕ್ರೀಡಾಂಗಣಕ್ಕೆ ಮೀಸಲಿಟ್ಟಿದ್ದ ಜಮೀನು, ಚನ್ನಮ್ಮ ವಸತಿ ಶಾಲೆ ಹಾಗೂ ಉಣ್ಣೆ ನಿಗಮದ ಕಟ್ಟಡ ನಿರ್ಮಾಣಕ್ಕೆ ನೀಡಿರುವ ಆದೇಶ ಹಿಂಪಡೆಯಬೇಕು ಅಲ್ಲಿಯವರೆಗೂ ಧರಣಿ ಮುಂದುವರೆಸುವುದಾಗಿ ಸ್ಪಷ್ಟಪಡಿಸಿದರು.

ರೈತ ಸಂಘದ ಜಿಲ್ಲಾ ಅಧ್ಯಕ್ಷ ನೀಲಪ್ಪ ಕಡಿಯವರ, ಹನುಮಂತ ಪೂಜಾರಿ, ಛತ್ರಪ್ಪ ಮೇಗೂರು, ದುರುಗೇಶ ಮಾದರ,
ಯಮನೂರಪ್ಪ ಮನ್ನೇರಾಳ, ಗುರುರಾಜ ಪೂಜಾರ,
ನಿರುಪಾದೆಪ್ಪ ಮಾದರ,
ದುರುಗಪ್ಪ ಟೆಂಗುಟಿ. ಬಸವರಾಜ ಬೇವಿನಗಿಡದ, ಯಮನೂರಪ್ಪ ಮೇಲಿನಮನಿ, ಹವಳವ್ವ, ಯಲ್ಲವ್ವ, ರೇಣವ್ವ, ನಾಗಮ್ಮ, ನಿಂಗಮ್ಮ, ಕನಕವ್ವ ಇತರರು ಇದ್ದರು.

# ಜನಮನ ಸೆಳೆದ ಮಲ್ಲೂರ ಗ್ರಾಮದಲ್ಲಿ ಜರುಗಿದ ಎತ್ತಿನ ಓಟದ ಸ್ಪರ್ಧೆ



**ಬ್ಯಾಡಗಿ :** ತಾಲೂಕಿನ ಮಲ್ಲೂರ ಗ್ರಾಮದಲ್ಲಿ ಗುರುವಾರ ಆಯೋಜಿಸಿದ್ದ ಎತ್ತಿನ ಓಟದ ಸ್ಪರ್ಧೆಗಳು ಜನಮನ ಸೆಳೆದವು.ಈ ಭಾಗದ ಸುತ್ತ ಮುತ್ತಲಿನ ಜಿಲ್ಲೆಗಳಾದ ದಾವಣಗೇರಿ, ಸಿರ್ಸಿ, ಶಿವಮೂಗ್ಗ, ಗದಗ, ಹಾಗೂ ಹಾವೇರಿ, ಸೇರಿದಂತೆ ನಾನಾ ಕಡೆಯಿಂದ ಆಗಮಿಸಿದ್ದ ನೂರಾರಕ್ಕೂ ಹೆಚ್ಚು ಹೋರಿಗಳು ಸ್ಪರ್ಧೆಯಲ್ಲಿ ಭಾಗವಹಿಸಿ ಗೆಲುವುಗಾಗಿ ಓಡುತ್ತ ಸೆಣಸಾಡಿದವು.ವಿವಿಧ ಗ್ರಾಮಗಳಿಂದ ಗೆಲುವಿಗಾಗಿ ಅನೇಕ ಹೋರಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದು ಹೋರಿಗಳು ಗೆಲುವಿಗಾಗಿ ಹರಸಾಹಸಪಡುತ್ತಿದ್ದವು.ಹೋರಿ ಓಡಿಸುವ ಎತ್ತುಗಳ ಸವಾರರು ಕೈಯಲ್ಲಿ ಚಾವಟಿ ಹಿಡಿದು ಎತ್ತುಗಳ ಮೈಮೇಲೆ ಗುರಿ ಮುಟ್ಟುವವರೆಗೆ ಪಟ, ಪಟನೆ ಬಾರಿಸುತ್ತಿದ್ದರು. ಕೆಲವು ಸವಾರರು ಎತ್ತಿನ ಬಾಲವನ್ನು ತಿರುವುವ ಮೂಲಕ ನಾಗಲೋಟದಲ್ಲಿ ಓಡುತ್ತಿದ್ದ ಎತ್ತುಗಳನ್ನು ಇನ್ನಷ್ಟು ವೇಗವಾಗಿ ಓಡುವಂತೆ ಕಿಚ್ಚು ಹತ್ತಿಸುತ್ತಿದ್ದರು. ಪ್ರೇಕ್ಷಕರು ಸಿಳ್ಳೆ ಹೊಡೆದು, ಕೇಕೆ ಹಾಕುವ ಮೂಲಕ ಹುರಿದುಂಬಿಸುತ್ತಿದ್ದರು. ಸುತ್ತಮುತ್ತಲ ಗ್ರಾಮಗಳ ಸಾವಿರಾರು ಜನ ಆಗಮಿಸಿ ಸ್ಪರ್ಧೆಯನ್ನು ಕಣ್ತುಂಬಿಕೊಂಡರು.ರೈತರಿಗೆ ಮುಂಗಾರು ಬಳಿಕ ಸದ್ಯ ಬಿಡುವಿನ ವೇಳೆ. ಇದೇ ಸಮಯದಲ್ಲಿ ಬೆಳಕಿನ ಹಬ್ಬ. ಇದರ ನಂತರ ಗ್ರಾಮೀಣ ಮತ್ತು ಹಳ್ಳಿಗರ ಅಚ್ಚುಮೆಚ್ಚಿನ ಕ್ರೀಡೆ ಅಂದ್ರೆ ಅದು ಹೋರಿ ಬೆದರಿಸುವ ಹಬ್ಬವಾಗಿದೆ. ತಮ್ಮ ಅಚ್ಚುಮಚ್ಚಿನ ಹೋರಿಗಳ ಸಾಮರ್ಥ್ಯ ಮತ್ತು ಶಕ್ತಿ ಪ್ರದರ್ಶನಕ್ಕಾಗಿ ಹೋರಿ ಬೆದರಿಸುವ ಸ್ಪರ್ಧೆಯಲ್ಲಿ ಭಾಗವಹಿಸುತ್ತಾರೆ. ಒಂದು ಸಲ ಸ್ಪರ್ಧೆ ಅಖಾಡಕ್ಕೆ ಇಳಿದ್ರೆ ಸಾಕು..ಬಲಿಷ್ಠಕಟ್ಟುಮಸ್ತಾದವಿವಿಧಮೂಲೆಮೂಲೆಯಿಂದ ಬಂದಿರುವ ಹೋರಿಗಳು ಎಂಟ್ರಿ ಕೊಡುತ್ತವೆ. ಈ ಹೋರಿಗಳ ಮಿಂಚಿನ ಓಟ ನೋಡುವುದೇ ರೋಮಾಂಚನವಾಗಿದೆ.. ಇದನ್ನು ನೋಡಿದ್ರೆ ಮೈಜುಂ.. ಎನ್ನಿಸುತ್ತದೆ. ಮೈನವಿರಿಳಿಸಿ ಬಿಡುತ್ತವೆ. ಅಖಾಡದಲ್ಲಿ ಹೋರಿಗಳು ಓಟ ನೋಡಲು ನೆರೆಯಗ್ರಾಮಗಳನ್ನುಸೇರಿದಂತೆನೆರೆಯತಾಲೂಕು ಹಾಗೂ ಜಿಲ್ಲೆಗಳಿಂದ ಹೋರಿ ಅಭಿಮಾನಿಗಳು ಆಗಮಿಸಿದ್ದರು. ಅಖಾಡದಲ್ಲಿ ಒಂದಡೆ ಹೋರಿ ವೇಗದಲ್ಲಿ ಓಡಿ ಬಂದ್ರೆ ಅದರ ಕೊರಳಲ್ಲಿರುವ ಕೊಬ್ಬರಿ ಹಾರ ಕಿತ್ತುಕೊಳ್ಳಲು ಸಾಹಸ ಯುವಕರ ಗುಂಪು ಮತ್ತೊಂದಡೆ ಇರುತ್ತದೆ.. ಈ ಯುವಕರ ಕೈಗೆ ಸಿಗದಂತೆ ಹೋರಿಗಳು ಓಡುವ ದೃಶ್ಯಗಳು ಮೈನವಿರೇಳಿಸುವಂತಿತ್ತು.. ಹೀಗೆ ನಡೆದ ಹೋರಿ ಬೆದರಿಸುವ ಸ್ಪರ್ಧೆಯು ಸಾವಿರಾರು ಜನರನ್ನು ಭರ್ಜರಿಯಾಗಿ ರಂಜಿಸಿದವು.ಸ್ಪರ್ಧೆಗೆ ಬಂದ ಹೋ-ರಿಗಳ ಮಾಲೀಕರು ತಮ್ಮ ನೆಚ್ಚಿನ ಹೋರಿಗಳನ್ನು ಬಣ್ಣ ಬಣ್ಣದ ಜೂಲ, ಬಲೂನು, ಕೊಬ್ಬರಿ ಹಾರ ಕಟ್ಟಿ ಶೃಂಗರಿಸಿ, ವಿವಿಧ ಚಿತ್ರ ನಟರು ಹಾಗೂ ಚಲನ ಚಿತ್ರ ನಟರ ಹೆಸರನ್ನು ಸೇರಿದಂತೆ ವಿವಿಧ ಹೆಸರಿನ ಹೋರಿಗಳು ಅಖಾಡದಲ್ಲಿ ಓಡಿದವುಬೆಳಗಿನಿಂದ ಜಿಟಿಜಿಟಿ ಮಳೆಯಾಗುತ್ತಿದ್ದರೂ ಮಳೆಯ ಮಧ್ಯೆದಲ್ಲಿಯೇ ಹೋರಿ ಬೆದರಿಸುವ ಸ್ಪರ್ಧೆ ನಡೆದವು. ಮಳೆಯನ್ನು ಲೆಕ್ಕಿಸದ ಹೋರಿ ಮಾಲೀಕರು ತಮ್ಮ ಹೋರಿಗಳನ್ನು ಸ್ಪರ್ಧೆಯಲ್ಲಿ ತೊಡಗಿಸಿದ್ದರು, ಹೋರಿ ಬೆದ-ರಿಸುವ ಪೈಲ್ವಾನರು ಮಳೆಯಲ್ಲಿ ಯೇ ಅನೇಕ ಹೋರಿಗಳನ್ನು ಬೆದರಿಸಿತಮ್ಮಕೈಚಳಕತೋರಿಸುತ್ತಾಖುಷಿಹಂಚಿಕೊಳ್ಳುತ್ತಿದ್ದ ದೃಸ್ಯಗಳು ಕಾಣಿಸುತ್ತಿದ್ದವು. ಹೋರಿ ಹಬ್ಬವನ್ನು ನೋಡಲಿಕ್ಕೆ ಆಗಮಿಸಿದ ಸಾವಿರಾರು ಜನರು ಮಳೆಯ ಮಧ್ಯೆದಲ್ಲಿಯೇ ಹೋರಿ ಹಬ್ಬವನ್ನು ನೋಡಿ ಸಂಭ್ರಮಿಸಿದರು. ಮಳೆಯ ಅವಘಡದಿಂದ ಹೋರಿ ಓಡಿಸುವ ಸ್ಪರ್ಧೆಗಳನ್ನು ಮಧ್ಯಾಹ್ನವೇ ಅಂತ್ಯಗೊಳಿಸಿದ್ದರಿಂದ ಹೋರಿ ಮಾಲೀಕರು, ಹೋರಿ ಬೆದರಿಸುವಲಿಕ್ಕೆ ಆಗಮಿಸಿದ ಪೈಲ್ವಾನರು ಹಾಗೂ ಹೋರಿ ಹಬ್ಬವನ್ನು ನೋಡಲಿಕ್ಕೆ ಬಂದ ಜನತೆ ಮಳೆರಾಯನ ಕಾಟಕ್ಕೆ ಬೇಸರಗೊಂಡರು.

# ಮತ ಕಳ್ಳತನ: ಸಹಿ ಸಂಗ್ರಹ ಅಭಿಯಾನಕ್ಕೆ ಜಿಲ್ಲಾಧ್ಯಕ್ಷ ನಂಜಯ್ಯನಮಠ ಚಾಲನೆ



**ಜಮಖಂಡಿ :** ಮತ ಕಳ್ಳತನ ದೇಶದ ಅತಿ ದೊಡ್ಡ ಚುನಾವಣಾ ಹಗರಣವಾಗಿದ್ದು, ಇದರ ವಿರುದ್ಧ ದೇಶಾದ್ಯಂತ ಮತದಾರರ ಹಕ್ಕುಗಳಿಗಾಗಿ ಸಹಿ ಸಂಗ್ರಹ ಅಭಿಯಾನ ಹಮ್ಮಿಕೊಳ್ಳಲಾಗಿದೆ. ವಿಧಾನಸಭಾ ಕ್ಷೇತ್ರದಲ್ಲಿ ಪ್ರತಿಯೊಂದು ಬೂತ್ ನಲ್ಲಿ ಕನಿಷ್ಠ 150 ಜನರ ಸಹಿ ಸಂಗ್ರಹಿಸಬೇಕೆಂದು ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಎಸ್. ಜಿ. ನಂಜಯ್ಯನಮಠ ಹೇಳಿದರು.

ನಗರದ ಮಾಜಿ ಶಾಸಕ ಆನಂದ ನ್ಯಾಮಗೌಡ ನಿವಾಸದ ಆವರಣದಲ್ಲಿ ಗುರುವಾರ ಮತ ಕಳ್ಳತನ ಮತ್ತು ಜನಾದೇಶದ ಕಗ್ಗೊಲೆ ನಿಲ್ಲಿಸಿ, ಮತದಾರರ ಹಕ್ಕುಗಳಿಗಾಗಿ ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಈ ಅಭಿಯಾನ ರಾಜಕೀಯ ಕಾರ್ಯಕ್ರಮವಲ್ಲ. ಸಂವಿಧಾನ ರಕ್ಷಣೆ, ದೇಶದ ಪ್ರಜಾಸತ್ತಾತ್ಮಕ ವ್ಯವಸ್ಥೆ ಕಾಪಾಡುವ ನಿರ್ಣಾಯಕ ಹೆಜ್ಜೆಯಾಗಿದೆ. ಕಾರ್ಯಕರ್ತರು, ಮುಖಂಡರು ಅಭಿಯಾನವನ್ನು ಗಂಭೀರವಾಗಿ ಪರಿಗಣಿಸಿ ಹೆಚ್ಚು ಸಹಿ ಸಂಗ್ರಹಿಸಿ ಯಶಸ್ವಿಗೊಳಿಸಬೇಕು ಎಂದರು.

ಕೆಪಿಸಿಸಿ ಉಪಾಧ್ಯಕ್ಷ ಆನಂದ ನ್ಯಾಮಗೌಡ ಮಾತನಾಡಿ, ಕೇಂದ್ರ ಎಐಸಿಸಿ ನಿರ್ದೇಶನದಂತೆ ಈ ಅಭಿಯಾನವನ್ನು ಬೂತ್ ಮಟ್ಟದಲ್ಲಿ ತೆಗೆದುಕೊಂಡು ಹೋಗಬೇಕು. ಹಲವಾರು ಕಡೆಗಳಲ್ಲಿ ಮತಗಳು ಕಳ್ಳತನವಾಗಿದ್ದು, ನಮ್ಮ ಹೈಕಮಾಂಡ್ ತನಿಖೆ ಮಾಡಿದಾಗ ಸತ್ಯಾಸತ್ಯತೆ ಕಂಡು ಬಂದಿದೆ. ಹಲವು ಕಡೆಗಳಲ್ಲಿ ಬೇನಾಮಿ ಮತಗಳು ಕಂಡು ಬಂದಿವೆ. ಮತ ಕಳ್ಳತನ ಮಾಡಿ ಬಿಜೆಪಿ ಅಧಿಕಾರಕ್ಕೆ ಬಂದಿದೆ. ಆದ್ದರಿಂದ ನಾವು ಇದನ್ನು ಗಂಭೀರವಾಗಿ ಪರಿಗಣಿಸಿದ್ದು, ಹಲವು ಸಲ ಆರೋಪ ಮಾಡಿ ಚುಣಾವಣೆ ಆಯೋಗಕ್ಕೆ ದೂರು ನೀಡಿದ್ದರೂ ಕೂಡ ಚುನಾವಣೆ ಆಯೋಗ ಬಾಯಿ ಬಿಟ್ಟು ಹೇಳುತ್ತಿಲ್ಲ.

ಚುನಾವಣೆ ಆಯೋಗ ಸ್ಪಷ್ಟನೆ ನೀಡುವುದನ್ನು ಬಿಟ್ಟು ಆಯೋಗದ ಪರವಾಗಿ ಬಿಜೆಪಿಯವರು ಏಕೆ ಉತ್ತರ ನೀಡುತ್ತಿದ್ದಾರೆಂದು ಪ್ರಶ್ನಿಸಿದರು.

ಇದೇ ಸಂದರ್ಭದಲ್ಲಿ ರಾಜು ಮನ್ನಿಕೇರಿ, ಜಿಲ್ಲಾ ಸೇವಾದಳ ಅಧ್ಯಕ್ಷ ಪ್ರಕಾಶ ಉತ್ತೂರ, ಮಹಮ್ಮದ ರಫೀಕ ಟಪಾಲ, ಟ್ರೇಡ್ ಯೂನಿಯನ್ ಜಿಲ್ಲಾಧ್ಯಕ್ಷ ತೌಫೀಕ ಪಾರತನಳ್ಳಿ, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಸುಮಿತ್ರಾ ಗುಲಬಾಳ, ನಗರಸಭೆ ಅಧ್ಯಕ್ಷ ಈಶ್ವರ ವಾಳೆನ್ನವರ, ಇಲಾಯಿ ಕಂಗನೊಳ್ಳಿ, ಮಹೇಶ ಕೋಳಿ, ರಫೀಕ ಬಾರಿಗಡ್ಡಿ, ಅನ್ವರ ಮೋಮಿನ, ರವಿ ಯಡಹಳ್ಳಿ, ದಾನೇಶ ಘಾಟಗೆ, ಕುಮಾರ ಆಲಗೂರ ಸಹಿತ ಇನ್ನೂ ಹಲವರು ಪಾಲ್ಗೊಂಡಿದ್ದರು.

# ಮೆಕ್ಕೆಜೋಳ: ಬೆಲೆ ಕುಸಿತ, ಮಳೆಯ ಹೊಡೆತ



**ಕನಕಗಿರಿ :** ತಾಲ್ಲೂಕಿನ ಚಿಕ್ಕಡಂಕನಕಲ್, ಜೀರಾಳ ಗ್ರಾಮ ಪಂಚಾಯಿತಿ ಹೊರತುಪಡಿಸಿದರೆ ಉಳಿದ ಎಲ್ಲಾ ಪ್ರದೇಶ ಸಂಪೂರ್ಣ ಮಳೆ ಆಧಾರಿತವಾಗಿದೆ. ತಾಲ್ಲೂಕಿನಲ್ಲಿ ಈ ಸಲ ಮುಂಗಾರು ಮಳೆ ಉತ್ತಮವಾಗಿ ಸುರಿದಿದೆ. ರೈತರು ವಿವಿಧ ಬೆಳೆಗಳನ್ನು ಬೆಳೆದಿದ್ದರೂ ಅವುಗಳಿಗೆ ಉತ್ತಮ ಬೆಲೆ ಸಿಗದ ಹಿನ್ನೆಲೆಯಲ್ಲಿ ಕಂಗಾಲಾಗಿದ್ದಾರೆ.

ಪಂಪ್‌ಸೆಟ್ ಹಾಗೂ ಮಳೆಯಾಶ್ರಿತ ರೈತರು ಸಜ್ಜೆ, ಜೋಳ, ಸೂರ್ಯಕಾಂತಿ, ಗೋವಿನಜೋಳ, ಶೇಂಗಾ(ಕಡಲೆ), ಹೆಸರು, ಅಲ್ಪಸ್ವಲ್ಪ ಮಡಿಕೆ, ಔಡಲ ಬೆಳೆಗಳನ್ನು ಬೆಳೆದಿದ್ದಾರೆ. ಸಜ್ಜೆ ಹಾಗೂ ಗೋವಿನಜೋಳದ ಫಸಲು ರೈತರ ಕೈಸೇರಿದೆ. ಆದರೆ ರೈತರ ಫಸಲು ಮಾರುಕಟ್ಟೆ ಪ್ರವೇಶಿಸುತ್ತಿದ್ದಂತೆ ಬೆಲೆ ಕುಸಿತ ಕಂಡಿರುವುದು ಸಂಕಷ್ಟಕ್ಕೆ ದೂಡಿದೆ. ಕಳೆದ ತಿಂಗಳಿಂದಲೂ ಗೋವಿನಜೋಳ ಕಟಾವು ಮಾಡಿರುವ ರೈತರು ಹೊಲದಲ್ಲಿರುವ ಖಣ, ಗಂಗಾವತಿ, ಕೊಪ್ಪಳ ರಸ್ತೆಗಳಲ್ಲಿ ಹಾಗೂ ಎಪಿಎಂಸಿಯ ಎಲ್ಲಾ ಸಿಸಿ ರಸ್ತೆಗಳಲ್ಲಿ ಗೋವಿನ ಜೋಳವನ್ನು ಹಸನು ಮಾಡಿ ಒಣಗಿಸುತ್ತಿರುವುದು ಕಂಡುಬಂದಿದೆ.

ಆರಂಭದಲ್ಲಿ ಕ್ವಿಂಟಲ್ ಗೋವಿನಜೋಳಕ್ಕೆ 2,200 2,500 ದರ ಇತ್ತು. ಹೆಚ್ಚಿನ ಪ್ರಮಾಣದಲ್ಲಿ ಆವಕವಾಗುತ್ತಿದ್ದಂತೆ ದರ ಕುಸಿತ ಕಂಡಿದೆ. ಸದ್ಯ ಕ್ವಿಂಟಲ್ ಗೋವಿನಜೋಳಕ್ಕೆ 1,850 ಇದೆ. ಹೆಚ್ಚಿನ ಪ್ರಮಾಣದಲ್ಲಿ ಬೆಳೆ ಬಂದಿದ್ದರೂ ಖರೀದಿಸುವವರು ಇಲ್ಲವಾಗಿದ್ದಾರೆ. ಅನಿವಾರ್ಯವಾಗಿ ಸಿಕ್ಕ ಬೆಲೆಗೆ ದಲ್ಲಾಳಿ ವರ್ತಕರಿಗೆ ಮಾರಾಟ ಮಾಡುವಂತಹ ಪರಿಸ್ಥಿತಿ ಇದೆ ಎಂದು ರೈತರು ಅಳಲು ತೋಡಿಕೊಂಡರು.

ಕೆಲ ದಲ್ಲಾಳಿ ವರ್ತಕರು ಸಹ ರೈತರಿಂದ ಖರೀದಿಗೆ ಹಿಂದೇಟು ಹಾಕುತ್ತಿರುವುದರಿಂದ ರೈತರು ನೇರವಾಗಿ ಖರೀದಿದಾರರಿಗೆ ಗೋವಿನ ಜೋಳ ಮಾರಾಟ ಮಾಡುತ್ತಿರುವುದು ಕಂಡುಬಂದಿದೆ. ಇಲ್ಲಿಯೇ ಉತ್ತಮ ಬೆಲೆ ಸಿಗುತ್ತಿರುವುದರಿಂದ ತಾಲ್ಲೂಕು ಮಾತ್ರವಲ್ಲದೆ ಪಕ್ಕದ ಕೊಪ್ಪಳ, ಗಂಗಾವತಿ, ಕುಷ್ಟಗಿ ತಾಲ್ಲೂಕುಗಳ ಕೊನೆಯ ಭಾಗದ ರೈತರು ಕೂಡ ಇಲ್ಲಿನ ಎಪಿಎಂಸಿಗೆ ಧಾನ್ಯಗಳನ್ನು ಮಾರಾಟ ಮಾಡಲು ತರುತ್ತಿದ್ದಾರೆ ಎಂದು ದಲ್ಲಾಳಿ ವರ್ತಕರು ತಿಳಿಸುತ್ತಾರೆ.

ಸದ್ಯ ಪಟ್ಟಣದ ಎಪಿಎಂಸಿ ಒಳಗೊಂಡಂತೆ ತಿಪ್ಪನಾಳ, ಸೂಳೇಕಲ್, ಅರಳಹಳ್ಳಿ, ನವಲಿ, ಹಿರೇಖೇಡ, ಹುಲಿಹೈದರ, ಮುಸಲಾಪುರ, ಗೌರಿಪುರ ಸೇರಿದಂತೆ ಇತರೆ ಗ್ರಾಮಗಳ ರಸ್ತೆ ಹಾಗೂ ಲೇಔಟ್‌ಗಳ ಸಿಸಿ, ಡಾಂಬರೀಕರಣ ರಸ್ತೆಗಳಲ್ಲಿ ಗೋವಿನಜೋಳ ಒಣಗಿಸುತ್ತಿರುವುದು ಕಂಡುಬಂದಿದೆ.

ಗೋವಿನಜೋಳದ ಆವಕ ಕಡಿಮೆಯಿದ್ದಾಗ ಪ್ರತಿ ಕ್ವಿಂಟಲ್‌ಗೆ 2,500ಕ್ಕೆ ಮಾರಾಟವಾಗುತ್ತಿತ್ತು. ದಿನ ಕಳೆದಂತೆ ಮಾರುಕಟ್ಟೆಗೆ ಫಸಲು ಹೆಚ್ಚಿನ ಪ್ರಮಾಣದಲ್ಲಿ ಆವಕ ಆಗುತ್ತಿರುವುದರಿಂದ ಬೆಲೆ ಕಡಿಮೆಯಾಗಿದೆ.

ಅಲ್ಲದೆ ಬೇರೆ ಬೇರೆ ರಾಜ್ಯಗಳಲ್ಲಿಯೂ ರೈತರು
ಹೆಚ್ಚಿನ ಪ್ರಮಾಣದಲ್ಲಿ ಗೋವಿನಜೋಳ ಬೆಳೆದಿರುವುದರಿಂದ ಹಾಗೂ ಮಾರುಕಟ್ಟೆಗೆ ಒಮ್ಮೆಲೆ ಫಸಲು ಆವಕ ಆಗುವುದರಿಂದ ಬೆಲೆ ಕಡಿಮೆಯಾಗಿದೆ' ಎಂದು ರೈತ ಭೀಮನಗೌಡ ಜೀರಾಳ ತಿಳಿಸುತ್ತಾರೆ.

**ಇಡೀ ವಾರ ಕಾಡಿದ ವರುಣ**

ಕಳೆದ ಐದಿನೈದು ದಿನಗಳ ಹಿಂದೆ ಗೋವಿನಜೋಳ ಕಟಾವು ಮಾಡಿ ಒಣಗಿಸಲು ಶುರು ಮಾಡಿದಾಗ ಇಡೀ ವಾರ ಮಳೆ ಸುರಿಯಿತು. ಹಗಲು? ರಾತ್ರಿ ಎನ್ನದೆ ಬೆಳೆ ಕಾದು ಸಿಕ್ಕ ದರಕ್ಕೆ ಮಾರಾಟ ಮಾಡಿದ್ದೇವೆ. ಸಜ್ಜೆ, ಮೆಕ್ಕೆಜೋಳ ಬೆಳೆದ ರೈತರ ಪರಿಸ್ಥಿತಿ ಹೇಳತೀರದು ಎಂದು ರೈತರು ದುಃಖದಿಂದ ಹೇಳಿದರು.

ಹೊಲವನ್ನು ಹದಗೊಳಿಸುವುದು, ಬೀಜ-ಗೊಬ್ಬರ, ಆಳು, ಕಸ ಕಡ್ಡಿ ತೆಗೆಯುವುದು, ಕುಂಟಿ ಹೊಡೆಯುವುದು, ಕಟಾವು ಮಾಡುವುದು ಸೇರಿದಂತೆ ಎಕರೆಗೆ ಸುಮಾರು 15 ಸಾವಿರದಿಂದ 20 ಸಾವಿರ ಖರ್ಚಾಗುತ್ತದೆ. ರೈತನ ಶ್ರಮಕ್ಕೆ ಬೆಲೆ ಇಲ್ಲದಂತಾಗಿದೆ' ಎಂದು ಹನುಮಂತಪ್ಪ ಅಳಲು ತೋಡಿಕೊಂಡಿದ್ದಾರೆ.

ಇದು ಒಂದು ವರ್ಷದ ಮಾತು ಅಲ್ಲ, ಪ್ರತಿವರ್ಷ ಮಾರುಕಟ್ಟೆಯಲ್ಲಿ ರೈತರು ಬೆಳೆದ ಬೆಳೆಗಳಿಗೆ ಬೆಲೆ ಕಡಿಮೆಯಾಗುತ್ತದೆ. ಚುನಾವಣೆ ಸಂದರ್ಭದಲ್ಲಿ ಭರಪೂರ ಭರವಸೆ ನೀಡುವ ರಾಜಕಾರಣಿಗಳು ರೈತನ ಫಸಲಿಗೆ ವೈಜ್ಞಾನಿಕ ಬೆಲೆ ಕೊಡಿಸುವಲ್ಲಿ ವಿಫಲರಾಗಿದ್ದಾರೆ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಪ್ರತಿ ಬಾರಿ ರೈತರ ಫಸಲು ಮಾರುಕಟ್ಟೆಗೆ ಬರುತ್ತಿದ್ದಂತೆ ಖರೀದಿದಾರರು ದಿಢೀರ್ ಬೆಲೆ ಕಡಿಮೆ ಮಾಡುತ್ತಾರೆ. ಸಾಲ ಮಾಡಿ ಬಿತ್ತನೆ ಮಾಡಿರುವ ರೈತರು ಸಾಲ ತೀರಿಸಿದರೆ ಸಾಕು ಎಂಬ ಹತಾಶೆಯಿಂದ ಸಿಕ್ಕ ಬೆಲೆಗೆ ಮಾರಾಟ ಮಾಡುತ್ತಾರೆ' ಎಂದು ಯಂ-ಕೋಬ ಹೇಳಿದರು.

ಕೇಂದ್ರ ಸರ್ಕಾರ ಒಟ್ಟು 2,400 ಮೆಕ್ಕೆಜೋಳ ಬೆಂಬಲ ಕೇಂದ್ರ ಆರಂಭಿಸಿದ್ದು ಕನಕಗಿರಿಯಲ್ಲಿಯೂ ಒಂದು ಕೇಂದ್ರ ತೆರೆಯಬೇಕು' ಎಂದು ಮಹಾಂತೇಶ ಸಜ್ಜನ್ ಮನವಿ ಮಾಡಿಕೊಂಡರು.

# ತಹಶೀಲ್ದಾರ ಕಾರ್ಯಾಲಯದಲ್ಲಿ ದೂರು ಮೇಲ್ವಿಚಾರಣೆ ತಂಡ, ಮತದಾರರ ಮಾಹಿತಿ ಮತ್ತು ಸಲಹಾ ಕೇಂದ್ರ ಸ್ಥಾಪನೆ

**ಕೊಪ್ಪಳ :** ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆ ಅಂಗವಾಗಿ ಮತದಾರರ ನೋಂದಣಿ ಪ್ರಕ್ರಿಯೆ ಆರಂಭವಾಗಿದ್ದು, ಅರ್ಹ ಮತದಾರರ ನೋಂದಣಿ ಸಂದರ್ಭ ಮತದಾರರ ಗೊಂದಲ, ದೂರು ಪರಿಹರಿಸುವ ಉದ್ದೇಶದಿಂದಕಾರಟಗಿಯತಹಶೀಲ್ದಾರಕಾರ್ಯಾಲಯದ ಸಿಬ್ಬಂದಿ ಹಾಲ್‌ನಲ್ಲಿ ದೂರು ಮೇಲ್ವಿಚಾರಣೆ ತಂಡ ಹಾಗೂ ಮತದಾರರ ಮಾಹಿತಿ ಮತ್ತು ಸಲಹಾ ಕೇಂದ್ರ ಸ್ಥಾಪಿಸಲಾಗಿದೆ.

ಭಾರತ ಚುನಾವಣಾ ಆಯೋಗದ ಮಾರ್ಗಸೂಚಿಗಳನ್ವಯ ಹೊಸದಾಗಿ ಮತದಾರರ ಪಟ್ಟಿಯನ್ನು ಸಿದ್ಧಪಡಿಸಬೇಕಾಗಿರುವುದರಿಂದ ಈ ಕಾರ್ಯಕ್ಕಾಗಿ ಅರ್ಹ ಮತದಾರರು ನೋಂದಣಿಗಾಗಿ ಮಾಹಿತಿ ಕೋರಿದಲ್ಲಿ ಸೂಕ್ತ ಮಾಹಿತಿಯನ್ನುನೀಡಿ,ಅವರಹೆಸರನ್ನುನೋಂದಾಯಿಸಲು ಅಲ್ಲದೆ ಈಗಾಗಲೇ ನೋಂದಣಿಯಾಗಿದ್ದಲ್ಲಿ ಅವರ ಮತದಾರರ ಪಟ್ಟಿಯ ಭಾಗ ಸಂಖ್ಯೆ ಹಾಗೂ ಕ್ರಮ ಸಂಖ್ಯೆಯ ಮಾಹಿತಿ ನೀಡುವುದು, ಇದನ್ನು ಹೊರತುಪಡಿಸಿಯು ಸಹ ಮತದಾರರ ನೋಂದಣಿ ಪ್ರಕ್ರಿಯೆ ಪ್ರಾರಂಭದಿಂದಹೀ ಚುನಾವಣೆಯ ಫಲಿತಾಂಶ ಘೋಷಣೆಯಾಗುವವರೆಗೆ ಲಿಖಿತವಾಗಿ, ಮೌಖಿಕವಾಗಿ ಹಾಗೂ ದೂರವಾಣಿ ಮುಖಾಂತರ ಸ್ವೀಕೃತವಾಗುವಂತಹ ದೂರುಗಳ ಮೇಲೆ ಸಹಾಯಕ ಮತದಾರರ ನೋಂದಣಾಧಿಕಾರಿಗಳು ಹಾಗೂ ಸಹಾಯಕ ಚುನಾವಣಾಧಿಕಾರಿಗಳ ನಿರ್ದೇಶನದ ಮೇರೆಗೆ ಕ್ರಮ ಕೈಗೊಳ್ಳಲು ತಹಶೀಲ್ದಾರ ಕಾರ್ಯಾಲಯದ ಸಿಬ್ಬಂದಿ ಹಾಲ್‌ನಲ್ಲಿ ದೂರು ಮೇಲ್ವಿಚಾರಣೆ ತಂಡ ಹಾಗೂ ಮತದಾರರ ಮಾಹಿತಿ ಮತ್ತು ಸಲಹಾ ಕೇಂದ್ರ (Complaints Monitoring Cell & Voters helpdesk) ಸ್ಥಾಪಿಸಲಾಗಿದೆ.

ಕಾರಣ ಪ್ರಸ್ತುತ ಕರ್ನಾಟಕ ವಿಧಾನ ಪರಿಷತ್ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆ?2026 ರ ಈ ಚುನಾವಣೆಗೆ ಸ್ವೀಕೃತವಾಗುವ ದೂರು ಹಾಗೂ ಮತದಾರರ ನೋಂದಣಿ ಕಾರ್ಯಕ್ಕಾಗಿ ಹಾಗೂ ಮತದಾರರ ಪಟ್ಟಿಗಳ ಕುರಿತು ಮಾಹಿತಿ ಪಡೆಯಲು ಇಚ್ಛಿಸುವವರು ಮತದಾರರ ಮಾಹಿತಿ ಮತ್ತು ಸಲಹಾ ಕೇಂದ್ರದ ಮೂಲಕ ಹಾಗೂ ಸಲಹಾ ಕೇಂದ್ರದ ದೂರವಾಣಿ ಸಂಖ್ಯೆ: 08533-200321 ಗೆ ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ದೂರು ಮೇಲ್ವಿಚಾರಣೆ ತಂಡಗಳ ಯಶಸ್ವಿ ಕಾರ್ಯಾಚರಣೆಗೆ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ತಾಲ್ಲೂಕು ಮಟ್ಟದ ಮೇಲ್ವಿಚಾರಣೆ ತಂಡದಲ್ಲಿ ಕಾರಟಗಿ ತಹಶೀಲ್ದಾರ ಕಾರ್ಯಾಲಯದ ಚುನಾವಣಾ ಶಿರಸ್ತೇದಾರ ಉಮಾಮಹೇಶ ಮೊ.ಸಂ: 9743600343, ಚುನಾವಣಾ ಆಪರೇಟರ್ ಸಿದ್ಧರಾಮನಗೌಡ ಮೊ.ಸಂ: 6362501720, ಚುನಾವಣೆ ಪ್ರ.ದ.ಸ ಈಶ್ವರ ಕೋರವಾರ ಮೊ.ಸಂ: 9900291219 ಇವರನ್ನು ನಿಯೋಜಿಸಲಾಗಿದೆ.

ಮೇಲಿನಂತೆ ನೇಮಕ ಮಾಡಲಾಗಿರುವಂತ ದೂರು ಮೇಲ್ವಿಚಾರಣೆ ತಂಡ ಹಾಗೂ ಮತದಾರರ ಮಾಹಿತಿ ಮತ್ತು ಸಲಹಾ ಕೇಂದ್ರ ತಕ್ಷಣದಿಂದಲೇ ಕಾರ್ಯನಿರ್ವಹಿಸಿ ಲಿಖಿತವಾಗಿ, ಮೌಖಿಕವಾಗಿ, ದೂರವಾಣಿ ಮುಖಾಂತರ ಸ್ವೀಕೃತವಾಗುವಂತಹ ಎಲ್ಲಾ ರೀತಿಯ ಸಲಹೆ ಹಾಗೂ ದೂರುಗಳಿಗೆ ದಾಖಲಾಧಾರಿತವಾದ ವಹಿಯನ್ನು ನಿರ್ವಹಿಸಿ
ನಿಯಮಾನುಸಾರ ವಿಲೇಗೊಳಿಸಿ ಕಾಲೋಚಿತಗೊಳಿಸಲು ಸೂಚಿಸಲಾಗಿದ್ದು ಸಾರ್ವಜನಿಕರು ಈ ತಂಡದ ಮುಖಾಂತರ ಮತದಾರರ ನೋಂದಣಿ ಹಾಗೂ ಚುನಾವಣೆ ಕುರಿತಾದ ಮಾಹಿತಿ ಹಾಗೂ ದೂರನ್ನು ದಾಖಲಿಸಬಹುದೆಂದು ಕಾರಟಗಿ ತಹಶೀಲ್ದಾರ ಹಾಗೂ ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಸಹಾಯಕ ಮತದಾರರ ನೋಂದಣಾಧಿಕಾರಿಗಳಾದ ಎಂ ಕುಮಾರಸ್ವಾಮಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಳ್ಳತನ ಪ್ರಕರಣ: ಅಪರಾಧಿಗೆ ದಂಡ ಸಹಿತ ಕಾರಾಗೃಹ ವಾಸದ ಶಿಕ್ಷೆ

**ಕೊಪ್ಪಳ :** ಕನಕಗಿರಿ ಪೊಲೀಸ್ ಠಾಣೆ ವ್ಯಾಪ್ತಿಯ ಬಂಕಾಪೂರ ಸೀಮಾದಲ್ಲಿ ಕಳ್ಳತನ ಮಾಡಲು ಯತ್ನಿಸಿದ್ದ ಆರೋಪಿಯ ಅಪರಾಧ ಸಾಬೀತಾದ ಹಿನ್ನೆಲೆಯಲ್ಲಿ ಗಂಗಾವತಿಯ 1ನೇ ಹೆಚ್ಚುವರಿ ಸಿ.ಜೆ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದ ನ್ಯಾಯಾಧೀಶರಾದ ಮೇಘಾ ಸೋಮಣ್ಣನವರ ಅವರು ಅಪರಾಧಿಗೆ ದಂಡ ಸಹಿತ ಕಾರಾಗೃಹ ವಾಸದ ಶಿಕ್ಷೆಯನ್ನು ನೀಡಿ ಅಕ್ಟೋಬರ್ 18 ರಂದು ತೀರ್ಪು ಪ್ರಕಟಿಸಿದ್ದಾರೆ.

ಆರೋಪಿಯು ದಿನಾಂಕ: 25–10–2020 ರಂದು ಬೆಳಿಗ್ಗೆ 4 ಗಂಟೆ ಸುಮಾರಿಗೆ ಕನಕಗಿರಿ–ಬಂಕಾಪೂರ ರಸ್ತೆಯ ಪಕ್ಕದಲ್ಲಿರುವ ಜಮೀನು ಸರ್ವೆ ನಂ.6 ರಲ್ಲಿರುವ ಮನೆಗೆ ಹೋಗಿ ರಾಡ್‌ನಿಂದ ಬೀಗ ಮುರಿದು ಮನೆ ಕಳ್ಳತನ ಯತ್ನಿಸಿದ್ದನು. ಮನೆಯಲ್ಲಿ ಏನೂ ಸಿಗದ ಕಾರಣ ಹತ್ತಿರದಲ್ಲಿದ್ದ ಶೆಡ್‌ನ ಬೀಗವನ್ನು ರಾಡ್‌ನಿಂದ ಒಡೆದು ಕೋಳಿಗಳ ಕಳ್ಳತನ ಮಾಡಲು ಯತ್ನಿಸಿದ್ದನು. ಈ ಸಂದರ್ಭ ಸಾಕ್ಷಿ ನಂ.1 ರವರು ಪಕ್ಕದ ಹೊಲದ ಸಾಕ್ಷಿ ನಂ.6 ಮತ್ತು 7 ರವರ ಜೊತೆ ಕೂಗಾಡುತ್ತಾ ಬರುವುದನ್ನು ನೋಡಿ ಆರೋಪಿಯು ತಾನು ತಂದಿದ್ದ ಬಜಾಜ್ ಪ್ಲಾಟಿನಾ ಮೋಟಾರ್ ಸೈಕಲ್ ನಂ. ಕೆಎ–34, ಎ–1286 ಮತ್ತು ಕಬ್ಬಿಣದ ರಾಡ್ ತೆಗೆದುಕೊಂಡು ಹೋಗುವಾಗ ಸಾಕ್ಷಿ ನಂ.1, 6 ಮತ್ತು 7 ರವರು ಆರೋಪಿಯನ್ನು ಠಾಣೆಗೆ ಒಪ್ಪಿಸಿದ್ದರು.

ಪ್ರಕರಣದ ತನಿಖೆ ನಡೆಸಿದ ತನಿಖಾಧಿಕಾರಿಗಳಾದ ಕನಕಗಿರಿ ಪೊಲೀಸ್ ಠಾಣೆಯ ಪಿ.ಎಸ್.ಐ ಕಾಸಿಂಸಾಬ ಹಾಗೂ ಎ.ಎಸ್.ಐ ಶರಣಪ್ಪ ಅವರು ಭಾರತೀಯ ದಂಡ ಸಂಹಿತೆ ಕಲಂ 380, 457 ಹಾಗೂ 511 ಪ್ರಕಾರ ಆರೋಪಿತನ ಮೇಲಿನ ಆರೋಪಗಳು ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿ ಮಂಜುನಾಥ @ ಮಂಜಪ್ಪ ತಂ. ಮರಿಯಪ್ಪ ಭಜಂತ್ರಿಯ ವಿರುದ್ಧ ಗಂಗಾವತಿಯ 1ನೇ ಹೆಚ್ಚುವರಿ ಸಿ.ಜೆ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿದ ನಡೆಸಿದ ನ್ಯಾಯಾಧೀಶರು ಸಾಕ್ಷಿದಾರರ ಸಾಕ್ಷ್ಯ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಆರೋಪಿಯು ತಪ್ಪಿತಸ್ಥ ಎಂದು ತೀರ್ಪು ನೀಡಿ, ಆರೋಪಿತನಿಗೆ ಭಾರತೀಯ ದಂಡ ಸಂಹಿತೆ ಕಲಂ 457 ಅಪರಾಧಕ್ಕೆ 2 ವರ್ಷ ಕಾರಾಗೃಹ ವಾಸದ ಶಿಕ್ಷೆ ಹಾಗೂ ರೂ.2 ಸಾವಿರ ಗಳ ದಂಡ, ದಂಡ ಕೊಡದೇ ಇದ್ದಲ್ಲಿ 2 ತಿಂಗಳು ಸಾದಾ ಕಾರಾಗೃಹ ವಾಸದ ಶಿಕ್ಷೆ ಅನುಭವಿಸುವಂತೆ, ಕಲಂ 511 ಅಪರಾಧಕ್ಕೆ 1 ವರ್ಷದ ಕಾರಾಗೃಹ ವಾಸದ ಶಿಕ್ಷೆ ಹಾಗೂ ರೂ.2 ಸಾವಿರಗಳ ದಂಡ, ದಂಡ ಕೊಡದೇ ಇದ್ದಲ್ಲಿ 2 ತಿಂಗಳು ಸಾದಾ ಕಾರಾಗೃಹ ವಾಸದ ಶಿಕ್ಷೆ ಅನುಭವಿಸುವಂತೆ ಆದೇಶಿಸಿದ್ದಾರೆ.

ಪ್ರಕರಣದಲ್ಲಿಸರ್ಕಾರದಪರವಾಗಿಸಹಾಯಕಸರ್ಕಾರಿ ಅಭಿಯೋಜಕರಾದ ಕರುಣಾಕರ ಅವರು ವಾದ ಮಂಡಿಸಿದ್ದರು ಎಂದು ಗಂಗಾವತಿಯ ಸಹಾಯಕ ಸರ್ಕಾರಿ ಅಭಿಯೋಜಕರ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

# ಅರಣ್ಯ ಇಲಾಖೆ ಕಿರುಕುಳ ಖಂಡಿಸಿ ಪ್ರತಿಭಟನೆ



**ಗಂಗಾವತಿ :** ತಾಲ್ಲೂಕಿನ ಆನೆಗೊಂದಿ ಭಾಗದ ರೈತರಿಗೆ ಕಿರುಕುಳ ನೀಡುತ್ತಿರುವ ಅರಣ್ಯ ಇಲಾಖೆ ಕ್ರಮ ಖಂಡಿಸಿ ಅಖಿಲ ಭಾರತ ಕಿಸಾನ್ ಸಭಾ ತಾಲ್ಲೂಕು ಸಮಿತಿ ಸದಸ್ಯರು ಶನಿವಾರ ನಗರದ ಅರಣ್ಯ ಇಲಾಖೆ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಜಿಲ್ಲಾಧ್ಯಕ್ಷ ಎ.ಹುಲುಗಪ್ಪ ಮಾತನಾಡಿ, ‘ತಾಲ್ಲೂಕಿನ ಆನೆಗೊಂದಿ, ಸಾಣಾಪುರ, ರಾಂಪುರ, ತಿರುಮಲಾಪುರ ಗ್ರಾಮ ವ್ಯಾಪ್ತಿಯಲ್ಲಿಹಲವುವರ್ಷಗಳಿಂದರೈತರು ಭೂಮಿ ಸಾಗುವಳಿ ಮಾಡಿಕೊಂಡು, ಉಪಜೀವನ ನಡೆಸುತ್ತಾ ಬರುತ್ತಿದ್ದಾ–ರೆ. ಈಚೆಗೆ ಇದೇ ನೆಪದಲ್ಲಿ ಅರಣ್ಯಾಧಿಕಾರಿಗಳು ರೈತರನ್ನ ಒಕ್ಕಲೆಬ್ಬಿಸುವ ಕೆಲಸ ಮಾಡುತ್ತಿರುವುದು ಖಂಡನೀಯ’ ಎಂದರು.

ಪ್ರಭಾವಿಗಳು, ರೆಸಾರ್ಟ್‌ಗಳ ಮಾಲಿಕರು ಅರಣ್ಯ ಭೂಮಿ ಒತ್ತುವರಿ ಮಾಡಿಕೊಂಡು ಬೃಹತ್ ಕಟ್ಟಡಗಳನ್ನು ನಿರ್ಮಿಸಿದರೂ, ಅರಣ್ಯ ಇಲಾಖೆ ಸಿಬ್ಬಂದಿ ಕಿಂಚಿತ್ತೂ ಕ್ರಮ ಜರುಗಿಸಲ್ಲ. ಆದರೆ ಬಡ ರೈತರ ವಿರುದ್ಧ ಕ್ರಮಕ್ಕೆ ಮುಂದಾಗುತ್ತಿದ್ದಾರೆ. ಇದು ಸರಿಯಲ್ಲ ಕೂಡಲೇ ರೈತರಿಗೆ ಕಿರುಕುಳ ನೀಡುವುದನ್ನು ನಿಲ್ಲಿಸಬೇಕು’ ಎಂದು ಒತ್ತಾಯಿಸಿ ಕಚೇರಿ ಸಹಾಯಕ ಸಿಬ್ಬಂದಿಗೆ ಮನವಿ ಸಲ್ಲಿಸಿದರು.

ಸಮಿತಿ ತಾಲ್ಲೂಕಾಧ್ಯಕ್ಷ ಮಂಜುನಾಥ, ಕಾರ್ಯದರ್ಶಿ ಶೇಖಮ್ಮ, ಪದಾಧಿಕಾರಿಗಳಾದ ಎ.ಎಲ್.ತಿಮ್ಮಣ್ಣ, ಹುಲಿಗೆಮ್ಮ, ಸೋಮಮ್ಮ ಸೇರಿ ಆನೆಗೊಂದಿ ಭಾಗದ ರೈತರು ಭಾಗವಹಿಸಿದ್ದರು.

# ಬೇರೂರಿದ ಸಿಬ್ಬಂದಿ ಎತ್ತಂಗಡಿಗೆ ಶಿಫಾರಸ್ಸು



**ಕೊಪ್ಪಳ :** ಜಿಲ್ಲೆಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಹಲವು ವರ್ಷಗಳಿಂದ ಬೇರೂರಿರುವ ಸಿಬ್ಬಂದಿಯನ್ನು ತ್ವರಿತವಾಗಿ ವರ್ಗಾವಣೆ ಮಾಡಬೇಕು ಎಂದು ಇಲಾಖೆಯ ಹಿರಿಯ ಅಧಿಕಾರಿಗಳು ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ.

ಇಲ್ಲಿನ ಇಲಾಖೆಯಲ್ಲಿ ಭ್ರಷ್ಟಚಾರ ನಡೆ–ಯುತ್ತಿದೆ. ಕಾನೂನು ಬಾಹಿರವಾಗಿ ಕೆಲಸ ನಡೆಯುತ್ತಿದ್ದು, ಸಿಬ್ಬಂದಿ ಹಾಗೂ ನಿಯಮಗಳ ಬಗ್ಗೆ ಪರಿಪೂರ್ಣ ಮಾಹಿತಿಯನ್ನೂ ಅಧಿಕಾರಿಗಳು ಕೂಡ ತಿಳಿದುಕೊಂಡಿಲ್ಲ. ಅವರನ್ನು ವರ್ಗಾವಣೆ ಮಾಡಬೇಕು ಎಂದು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರೂ ಆದ ಶಾಸಕ ಬಸವರಾಜ ರಾಯರಡ್ಡಿ ಅವರು ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ.

ಈ ಪತ್ರದ ಬೆನ್ನಲ್ಲೆ ಸರ್ಕಾರದ ಮುಖ್ಯ ಕಾರ್ಯದರ್ಶಿ ವರದಿ ಕೇಳಿದ ಹಿನ್ನಲೆಯಲ್ಲಿ ಜಿಲ್ಲಾಡಳಿತ ಮತ್ತು ಗಣಿ ಇಲಾಖೆಯ ಹಿರಿಯ ಅಧಿಕಾರಿಗಳು ವರದಿ ಸಲ್ಲಿಸಿದ್ದಾರೆ. ವರದಿಯಲ್ಲಿನ ಅಂಶಗಳನ್ನು ‘ಪ್ರಜಾವಾಣಿ’ ಜೊತೆ ಹಂಚಿಕೊಂಡ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ‘ಕೊಪ್ಪಳದಲ್ಲಿ ಹಲವು ಸಿಬ್ಬಂದಿ ಅನೇಕ ವರ್ಷಗಳಿಂದ ಬೇರೂರಿದ್ದಾರೆ. ಸಿಬ್ಬಂದಿ ಹಾಗೂ ಹಿರಿಯ ಭೂ ವಿಜ್ಞಾನಿ ಪುಷ್ಪಲತಾ ಎಸ್. ಕವಲೂರು ಸೇರಿದಂತೆ ಹಲವರನ್ನು ವರ್ಗಾವಣೆ ಮಾಡುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿ ಪತ್ರ ಬರೆಯಲಾಗಿದೆ’ ಎಂದು ಖಚಿತಪಡಿಸಿದರು.

ಇಲಾಖೆಯಲ್ಲಿ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ ಕಿರಿಯ ಎಂಜಿನಿಯರ್ ನವೀನ್ ಕುಮಾರ್ 12 ವರ್ಷ, ಅಧೀಕ್ಷಕ ಮಲ್ಲಿಕಾರ್ಜುನ ಕಮ್ಮಾರ, ಪ್ರಥಮ ದರ್ಜೆ ಸಹಾಯಕಿ ತ್ರಿವೇಣಿ ಒಡೆಯರ್ ಒಂಬತ್ತು ವರ್ಷ, ದ್ವಿತೀಯ ದರ್ಜೆ ಸಹಾಯಕಿ ಸುಕನ್ಯಾ ಐದು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಬಳ್ಳಾರಿ ಉತ್ತರ ವಲಯದ ಹೆಚ್ಚುವರಿ ನಿರ್ದೇಶಕರು ಕೂಡ ಇಲಾಖೆಯ ನಿರ್ದೇಶಕರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಬೇರೂರಿರುವವರ ಪೈಕಿ ಕೆಲ ಸಿಬ್ಬಂದಿ ಗಣಿ ಗುತ್ತಿಗೆಗಳ ಅನಧಿಕೃತ ಗಣಿಗಾರಿಕೆ, ಸಾಗಾಣಿಕೆಗೆ ಪರೋಕ್ಷವಾಗಿ ಗುತ್ತಿಗೆದಾರರಿಗೆ ಸಹಕಾರ ನೀಡುತ್ತಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಅನೇಕ ದೂರುಗಳು ಕೂಡ ಬಂದಿವೆ’ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ದೂರು: ರಾಯರಡ್ಡಿ ಅವರ ಪತ್ರದ ಬಳಿಕ ಸಾಮಾಜಿಕ ತಾಣಗಳಲ್ಲಿ ಹರಿದಾಡಿದ 20 ಪ್ರಶ್ನೆಗಳನ್ನು ಒಳಗೊಂಡ ಅನಾಮಧೇಯ ಪತ್ರದ ಮೂಲದ ಬಗ್ಗೆ ತನಿಖೆ ನಡೆಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರಿಗೆ ದೂರು ನೀಡಿದ್ದೇನೆ ಎಂದು ಹಿರಿಯ ಭೂ ವಿಜ್ಞಾನಿ ಪುಷ್ಪಲತಾ ಕವಲೂರು ತಮ್ಮನ್ನು ಭೇಟಿಯಾದ ಮಾಧ್ಯಮದವರಿಗೆ ತಿಳಿಸಿದರು.

# ವೈದ್ಯರು ಗ್ರಾಮೀಣ ಸೇವೆಗೂ ಆದ್ಯತೆ ನೀಡಿ: ಜಿಲ್ಲಾಧಿಕಾರಿ ಸುರೇಶ ಇಟ್ನಾಳ




**ಗಂಗಾವತಿ :** ‘ವೈದ್ಯ ವೃತ್ತಿ ಎಂಬುದು ಒಂದು ಸೇವಾ ವೃತ್ತಿ. ವೈದ್ಯರು ಗ್ರಾಮೀಣ ಭಾಗದಲ್ಲಿ ಸೇವೆ ಸಲ್ಲಿಸಲು ಹೆಚ್ಚಿನ ಆದ್ಯತೆ ನೀಡಬೇಕು. ಆಗಮಾತ್ರ ಬಡವರಿಗೆ ಸೂಕ್ತ ರೀತಿಯಲ್ಲಿ ಚಿಕಿತ್ಸೆ ಸೌಲಭ್ಯ ದೊರತಂತೆ ಆಗುತ್ತದೆ. ಈ ಬಗ್ಗೆ ಸರ್ಕಾರ ವಿಶೇಷ ಕಾಯ್ದೆ ರೂಪಿಸಿದೆ’ ಎಂದು ಜಿಲ್ಲಾಧಿಕಾರಿ ಸುರೇಶ ಇಟ್ನಾಳ ಹೇಳಿದರು.

ನಗರದ ರಾಯಚೂರು ರಸ್ತೆಯಲ್ಲಿನ ಅಮರ್ ಗಾರ್ಡನ್‌ನಲ್ಲಿ ಭಾರತೀಯ ವೈದ್ಯಕೀಯ ಸಂಘದಿಂದ ಶುಕ್ರವಾರ ನಡೆದ ಭಾರತೀಯ ವೈದ್ಯಕೀಯ ಸಂಘದ 91ನೇ ರಾಜ್ಯ ಮಟ್ಟದ ಸಮ್ಮೇಳನದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಇತಿಹಾಸ ಗಮನಿಸಿದಾಗ ಕಾಯಿಲೆಗಳಿಗೆ ಔಷಧ ನೀಡುವ ವೃತ್ತಿಯನ್ನು ಋಷಿ ಮುನಿಗಳು ಸೇವಾ ಮನೋಭಾವದಿಂದ ಮಾಡಿಕೊಂಡು ಬಂದಿದ್ದು, 21ನೇ ಶತಮಾನದಲ್ಲಿ ವೈದ್ಯಕೀಯ ವೃತ್ತಿಯಾಗಿದೆ. ಔಷಧ ನೀಡುವ ಕೆಲಸ ಮಾಡುತ್ತಿರುವ, ಮುಂದುವರಿಸಿಕೊಂಡು ಹೋಗುತ್ತಿರುವ ವೈದ್ಯರು ಸೇವಾ ಮನೋಭಾವ ಗಮನದಲ್ಲಿಇಟ್ಟು–ಕೊಂಡು ಕೆಲಸ ಮಾಡಬೇಕಾಗಿದೆ. ಗ್ರಾಮೀಣ ಭಾಗಗಳಲ್ಲಿ ಎಷ್ಟೋ ಜನರು ಸಮಯಕ್ಕೆ ಸರಿಯಾಗಿ ಚಿಕಿತ್ಸೆ ದೊರೆಯದೆ ಸಂಕಷ್ಟ ಎದುರಿಸುತ್ತಿದ್ದಾರೆ. ಹಾಗಾಗಿ ವೈದ್ಯರು ಗ್ರಾಮೀಣ ಭಾಗದ ಸೇವೆಗೆ ಪ್ರಮುಖ ಆದ್ಯತೆ ನೀಡಬೇಕಾಗಿದೆ. ಇನ್ನು ಸಾರ್ವಜನಿಕರ ಆರೋಗ್ಯ ಸೇವೆಯಲ್ಲಿ ವೈದ್ಯರ ಪಾತ್ರ ಬಹಳ ಮುಖ್ಯವಾಗಿದೆ. ಕೋವಿಡ್‌ನಂತಹ ಸಮಯದಲ್ಲಿ ಎಷ್ಟೋ ವೈದ್ಯರು ತಮ್ಮ ಪ್ರಾಣ ಲೆಕ್ಕಿಸದೆ ಸೇವೆ ಸಲ್ಲಿಸಿ, ಸಾಕಷ್ಟು ಜನರ ಪ್ರಾಣ ಕಾಪಾಡಿದ್ದಾರೆ’ ಎಂದರು.

ಭಾರತೀಯ ವೈದ್ಯಕೀಯ ಸಂಘದ ರಾಜ್ಯಾಧ್ಯಕ್ಷ ವಿ.ವಿ.ಚಿನಿವಾಲರ್ ಮಾತನಾಡಿ, ‘ಭಾರತೀಯ ವೈದ್ಯಕೀಯ ಸಂಘ ಪ್ರತಿವರ್ಷವೂ ರಾಜ್ಯಮಟ್ಟದ ಸಮ್ಮೇಳನ ನಡೆಸುವ ಮೂಲಕ ಹೊಸ ಹೊಸ ಆವಿಷ್ಕಾರಗಳ ಬಗ್ಗೆ ಚರ್ಚೆ ನಡೆಸಲಾಗುವುದು. ಇತ್ತೀಚಿನ ದಿನಗಳಲ್ಲಿ ಸಾಕಷ್ಟು ಮಾರಕ ಕಾಯಿಲೆಗಳಿಗೆ ಔಷಧಗಳು ದೊರೆಯುತ್ತಿವೆ. ಆ ಕಾಯಿಲೆಗಳನ್ನು ಮೊದಲ ಹಂತದಲ್ಲಿ ಗುರುತಿಸುವ ಕೆಲಸ ಆಗಬೇಕಾಗಿದೆ. ಅದಕ್ಕಾಗಿಯೇ ಸಮ್ಮೇಳನದಲ್ಲಿ ವೈದ್ಯಕೀಯ ಚರ್ಚಾಗೋಷ್ಠಿಗಳ ಮೂಲಕ ವೈದ್ಯರಿಗೆ ತಿಳಿಸುವ ಕೆಲಸ ಸಂಘದಿಂದ ಮಾಡಲಾಗುತ್ತಿದೆ’ ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಅರಸಿದ್ಧಿ, ಕಿಮ್ಸ್ ನಿರ್ದೇಶಕ ವೈಜನಾಥ ಇಟಗಿ, ವೈದ್ಯ ಡಾ.ಹರೀಶ್, ಡಾ.ಶಂಕರ ನಾರಾಯಣ, ಡಾ.ಬಸವರಾಜ ಸಿಂಗನಾಳ, ಡಾ.ಅಮರೇಶ ಪಾಟೀಲ್, ಡಾ.ಮಲ್ಲನಗೌಡ, ಡಾ.ಎಸ್.ವಿ.ಮಟ್ಟಿ, ಡಾ.ಬಸವರಾಜ, ಡಾ.ಅರುಣಾ ಉಪಸ್ಥಿತರಿದ್ದರು.

# ರಮೇಶ ಕತ್ತಿ ವಿರುದ್ಧ ದೂರು



**ವಿಜಯಪುರ :** ದಲಿತ ದೌರ್ಜನ್ಯ ತಡೆ ಕಾನೂನಿನಡಿ ಬೆಳಗಾವಿಯ ಸಹಕಾರಿ ಧುರೀಣ, ಮಾಜಿ ಸಂಸದ ರಮೇಶ ಕತ್ತಿ ಅವರ ಮೇಲೆ ವಾಲ್ಮೀಕಿ ಸಮಾಜದ ಮುಖಂಡರು ಬಬಲೇಶ್ವರ ಹಾಗೂ ವಿಜಯಪುರ ಡಿಸಿಆರ್‌ಇ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿದ್ದಾರೆ.

ಕಳೆದ ಅ.19 ರಂದು ಮಧ್ಯಾಹ್ನ ಬೆಳಗಾವಿಯ ಬಿಕೆ ಮಾದರಿ ಹೈಸ್ಕೂಲ್ ಮೈದಾನದಲ್ಲಿ ಡಿ.ಸಿ.ಸಿ ಬ್ಯಾಂಕ್ ಚುನಾವಣಾ ಮತದಾನ ಪ್ರಕ್ರಿಯೆ ನಡೆಯುತ್ತಿರುವ ಸಂದರ್ಭದಲ್ಲಿ ಬೆಲ್ಲದಬಾಗೇವಾಡಿಯ ನಿವಾಸಿ, ಚಿಕ್ಕೋಡಿ ಮಾಜಿ ಸಂಸದ ಹಾಗೂ ಬೆಳಗಾವಿ ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ರಮೇಶ ವಿಶ್ವನಾಥ ಕತ್ತಿ ವಾಲ್ಮೀಕಿ ಸಮುದಾಯದ ಕುರಿತು ಅಸಂಬದ್ಧ ಪದ ಪ್ರಯೋಗಿಸಿದ್ದಾರೆಎಂದು ಮುಖಂಡ ಮಲ್ಲಿಕಾರ್ಜುನ ಬಟಗಿ ದೂರು ಸಲ್ಲಿಸಿದ್ದಾರೆ.

ದೂರಿನ ಅನ್ವಯ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಬೆಳಗಾವಿ ಜಿಲ್ಲೆಯ ಡಿಸಿಆರ್‌ಇ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ಲಕ್ಷ್ಮಣ ಹಂದ್ರಾಳ, ಜಗದೇವ ಸೂರ್ಯವಂಶಿ, ಸುರೇಶ ಜೇಬಿ ಉಪಸ್ಥಿತರಿದ್ದರು.

# ಕಬ್ಬಿನ ದರ ನಿಗದಿಗೆ ರೈತರ ಒತ್ತಾಯ



**ಚಡಚಣ :** ಪ್ರಸಕ್ತ ಸಾಲಿನಲ್ಲಿ ರೈತರು ಕಳುಹಿಸಿದ ಕಬ್ಬಿಗೆ ಬೆಲೆ ನಿಗದಿಗೊಳಿಸಿ ಕಾರ್ಖಾನೆ ಆರಂಭಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತೋದಯ ಹಸಿರು ಸೇನೆ ಕಾರ್ಯಕರ್ತರು ಶುಕ್ರವಾರ ಹಾವಿನಾಳದ ಶ್ರೀದತ್ತ ಸಕ್ಕರೆ ಕಾರ್ಖಾನೆ ಎದುರು ಪ್ರತಿಭಟನೆ ನಡೆಸಿ ತಹಶೀಲ್ದಾರ್ ಸಂಜಯ ಇಂಗಳೆ ಅವರಿಗೆ ಮನವಿ ಸಲ್ಲಿಸಿದರು.

ಹಸಿರು ಸೇನೆಯ ವಿಜಯಪುರ ಜಿಲ್ಲಾ ಘಟಕದ ಅಧ್ಯಕ್ಷ ನಾಗನಾಥಗೌಡ ಬಿರಾದಾರ ಮಾತನಾಡಿ, ಶ್ರೀದತ್ತ ಸಕ್ಕರೆ
ಕಾರ್ಖಾನೆಯ ಆಡಳಿತ ಮಂಡಳಿಯವರು ಕಬ್ಬಿಗೆ ದರ ನಿಗದಿಪಡಿಸದೆ, ಹಳೆಯ ದರಗಳನ್ನೇ ಮುಂದುವರಿಸಿ ಕಬ್ಬು ನುರಿಸುವಿಕೆಗೆ ಚಾಲನೆ ನೀಡಿದ್ದಾರೆ. ಇದು ಖಂಡನೀಯ ಯಾವುದೇ ಕಾರ್ಖಾನೆಗಳು ಮೊದಲು ಕಬ್ಬು ನುರಿಸುವ ಪ್ರಕ್ರಿಯೆಗೆ ಚಾಲನೆ ನೀಡಿ, ನಂತರ ಬೆಲೆ ನಿಗದಿ ಮಾಡುವ ನೀತಿ ಸಹಿಸುವುದಿಲ್ಲ. ರೈತರ ಪ್ರತಿ ಟನ್ ಕಬ್ಬಿಗೆ 3500 ದರ ನಿಗದಿಪಡಿಸಿ, ಮುಂಗಡ ಪಾವತಿಸಿ ಕಾರ್ಖಾನೆಗಳನ್ನು ಪ್ರಾರಂಭಿಸಬೇಕು. ಒಂದು ವೇಳೆ ಬೆಲೆ ನಿಗದಿ ಮಾಡದೇ ಕಾರ್ಖಾನೆ ಪ್ರಾರಂಭಿಸಿದರೇ ಉಗ್ರ ಹೋರಾಟ ಅನಿವಾರ್ಯ ಎಂದು ಎಚ್ಚರಿಸಿದರು.

ರೈತ ಮುಖಂಡರಾದ ಸಂತೋಷ ಭೈರಗೊಂಡ, ಸತೀಶ ಭೈರಗೊಂಡ, ಮಲ್ಲಿಕಾರ್ಜುನ ಬಿರಾದಾರ, ಮಹಾದೇವ ಭಂಡಿ, ಅಶೋಕ ಬೋರ್ಗಿ, ವಿಲಾಸ ಡೊಳ್ಳಿ, ಫೇನಪ್ಪ ಬಿರಾದಾರ, ಬಸವರಾಜ ಡೋಣಿ ಇದ್ದರು.

# ಮಾದಿಗ ಸಮಾಜದ ಬೆಂಬಲ ಶಾಸಕ ಲಕ್ಷ್ಮಣ ಸವದಿ ಬೆಂಬಲಿತ ರೈತ ಸಹಕಾರ ಪೆನಲ್‌ಗೆ : ಮಂಜು ಹೋಳಿಕಟ್ಟಿ



**ಅಥಣಿ :** ಕೃಷ್ಣಾ ಸಹಕಾರಿ ಸಕ್ಕರೆ ಕಾರಖಾನೆ ಚುನಾವಣೆಯಲ್ಲಿ ಮಾದಿಗ ಸಮಾಜದ ಸರ್ವಾನುಮತದ ನಿರ್ಣಯದೊಂದಿಗೆ ಯಾರು ಚುನಾಚಣೆಗೆ ನಾಮಪತ್ರ ಸಲ್ಲಿಸಿಲ್ಲ, ಆದರೆ ಯಾರೋ ನಾಲ್ಕು ಜನ ಸೇರಿ ಒಬ್ಬರನ್ನು ನೇಮಿಸಿ ಚುನಾವಣೆಗೆ ನಿಲ್ಲಿಸಿದ್ದಾರೆ, ಆದರೆ ನಮ್ಮ ಸಮಾಜದ ಬೆಂಬಲ ಅವರಿಗೆ ಇಲ್ಲಾ, ಮಾದಿಗ ಸಮಾಜ ಶಾಸಕ ಲಕ್ಷ್ಮಣ ಸವದಿ ಬೆಂಬಲಿತ ರೈತ ಸಹಕಾರ ಪ್ಯಾನೆಲ್‌ಗೆ ಬೆಂಬಲ ವನ್ನು ವ್ಯಕ್ತಪಡಿಸಿರುವುದಾಗಿ ಮಾದಿಗ ಸಮಾಜದ ಅಧ್ಯಕ್ಷ ಮಂಜು ಹೋಳಿಕಟ್ಟಿ ಹೇಳಿದರು

ಅಥಣಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಗುರುವಾರ ಮಾದಿಗ ಸಮಾಜದ ಮುಖಂಡರ ಸಮ್ಮುಖದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡುತ್ತಿದ್ದರು.

ಕೃಷ್ಣಾ ಸಹಕಾರಿ ಸಕ್ಕರೆ ಕಾರಖಾನೆ ಆಡಳಿತ ಮಂಡಳಿ ಚುನಾವಣೆಯಲ್ಲಿ ಸಮಾಜದ ಮುಖಂಡರ ಗಮನಕ್ಕೆ ತರದೆ ಒಬ್ಬ ಅಭ್ಯರ್ಥಿ ಸ್ಪರ್ಧಿಸಿರುವುದು ಅವರ ವೈಯಕ್ತಿಕ ನಿರ್ಧಾರವಾಗಿದ್ದು, ಸಮುದಾಯದಿಂದ ಅವರಿಗೆ ಯಾವುದೇ ಬೆಂಬಲವಿಲ್ಲ. ನಮ್ಮ ಸಮಾಜದ ಒಪ್ಪಿಗೆ ಪಡೆದು ಯಾರು ಸಹ ನಾಮಪತ್ರ ಸಲ್ಲಿಸಿಲ್ಲ, ಆದರೆ ಒಂದು ಗುಂಪಿನಿಂದ ಮಾದಿಗ ಜನಾಂಗದ ವ್ಯಕ್ತಿಯನ್ನು ಚುನಾವಣೆಯಲ್ಲಿ ನಾಮಪತ್ರ ಸಲ್ಲಿಸಿ, ಸಮಾಜ ಬಾಂಧವರಲ್ಲಿ ತಪ್ಪು ಮಾಹಿತಿ ನೀಡಿ ಸಮಾಜದ ಬೆಂಬಲ ನಮಗೆ ಇದೆ ಎಂದು ಹೇಳುತ್ತಿದ್ದು ಅದಕ್ಕೆ ಯಾರು ಸಹ ಕಿವಿಗೊಡಬಾರದು ಅವರಿಗೆ ನಮ್ಮ ಬೆಂಬಲವಿಲ್ಲ.

ಮಾದಿಗ ಸಮಾಜದಿಂದ ಶಾಸಕ ಲಕ್ಷ್ಮಣ ಸವದಿ ಅವರ ಬೆಂಬಲಿತ ರೈತ ಸಹಕಾರ ಪೆನಲ್ ಗೆ ಮಾದಿಗ ಸಮಾಜದ ಸಂಪೂರ್ಣ ಬೆಂಬಲ ಇದೆ ಎಂದು ಹೇಳಿದರು.

ಆನಂತರ ನ್ಯಾಯವಾದಿ ಪ್ರಮೋದ ಹಿರೇಮನಿ ಹಾಗೂ ಮುಖಂಡ ಆದರ್ಶ ಗಸ್ತಿ ಮಾತನಾಡಿ, ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ ಚುನಾವಣೆಯಲ್ಲಿ ಸ್ಪರ್ಧಿಸಿರುವ ನಮ್ಮ ಸಮುದಾಯದವರು, ಸಮಾಜದ ಬಂಧು ಬಾಂಧವರನ್ನು ಗೊಂದಲಕ್ಕೀಡು ಮಾಡುವ ಹಾಗೂ ತಪ್ಪು ಮಾಹಿತಿ ನೀಡುವ ಕೆಲಸ ಮಾಡುತ್ತಿದ್ದಾರೆ.

ಸಮಾಜದ ಗಮನಕ್ಕೆ ತರದೆ ಅವರು ಸ್ಪರ್ಧೆಗೆ ಇಳಿದಿರುವುದರಿಂದ, ನಾವಾಗಲಿ ಅಥವಾ ನಮ್ಮ
ಸಮುದಾಯದ ಇತರ ಪ್ರತಿನಿಧಿಗಳಾಗಲಿ. ಮುಖಂಡರಾಗಲಿ ಅವರಿಗೆ ಬೆಂಬಲ ಸೂಚಿಸಿಲ್ಲ ಎಂದು ತಿಳಿಸಿದರು.

ಈ ವೇಳೆ ಸಮಾಜ ಮುಖಂಡರಾದ ಸದಾಶಿವ ಮಾಂಗ, ಪ್ರಕಾಶ ಹೆಗ್ಗಣ್ಣವರ, ಪರಸು ಮುರಗುಂಡಿ, ಮಹಾದೇವಿ ಹೋಳಿಕಟ್ಟಿ, ಮಹಾವೀರ ಆಚಾರಟ್ಟಿ, ಆನಂದ ಹೋಳಿಕಟ್ಟಿ, ಶಂಕರ ಹಿರೇಮನಿ, ಉದಯ ಅವಳೆ, ಪರಶು ಹೆಗ್ಗಣ್ಣವರ, ಬಾಬುರಾವ ಜೆಂಡೆ, ಹನಮಂತ ಮಾದರ, ಆದರ್ಶ ಗಸ್ತಿ, ಮಹಾಂತೇಶ ಮಾದರ, ಸಂಜೂ ಮಾದರ ಸಂಜು ಪಾರ್ಥನಹಳ್ಳಿ ಸೇರಿದಂತೆ ಹಲವರು ಉಪಸ್ಥಿತರಿದ್ದರು

ಮಾದಿಗ ಸಮಾಜದ ವ್ಯಕ್ತಿ ಚುನಾವಣೆಗೆ ನಿಲ್ಲುವ ಮೊದಲು ಸಮುದಾಯದ ಮುಖಂಡರೊಂದಿಗೆ ಯಾವುದೇ ರೀತಿಯಲ್ಲಿ ಚರ್ಚೆ ನಡೆಸಿಲ್ಲ. ಸಮುದಾಯದ ಹೆಸರಿನಲ್ಲಿ ಯಾವುದೇ ಕಾರ್ಯ ಮಾಡುವ ಮೊದಲು ಮುಖಂಡರು ಮತ್ತು ಸಮುದಾಯದೊಂದಿಗೆ ಚರ್ಚೆ ನಡೆಸುವುದು ಅಗತ್ಯವಾಗಿತ್ತು. ಆದರೆ, ಸ್ವಾಭಿಮಾನಿ ರೈತ ಪೆನಲ್‌ನಿಂದ ಸ್ಪರ್ಧಿಸಿರುವುದು ಅವರ ಸ್ವಂತ ನಿರ್ಧಾರವಾಗಿದ್ದು, ಮಾದಿಗ ಸಮುದಾಯಕ್ಕೂ ಮತ್ತು ಅವರ ನಿರ್ಧಾರಕ್ಕೂ ಯಾವುದೇ ಸಂಬಂಧವಿಲ್ಲ. ಯಾರೋ ರಾಜಕೀಯ ಲಾಭಕ್ಕಾಗಿ ಇವರನ್ನು ಬಳಸಿಕೊಳ್ಳುತ್ತಿದ್ದು, ನಾವಂತೂ ಸಮುದಾಯದಿಂದ ಯಾವುದೇ ರೀತಿಯ ಬೆಂಬಲ ನೀಡುವುದಿಲ್ಲ, ನಮ್ಮ ಬೆಂಬಲ ಶಾಸಕ ಲಕ್ಷ್ಮಣ ಸವದಿ ಅವರ ನೇತೃತ್ವದ ರೈತ ಸಹಕಾರ ಪೆನಲ್ ಗೆ ಇದೆ. ಎಂದು ಮಂಜು ಹೋಳಿಕಟ್ಟಿ ಸ್ಪಷ್ಟಪಡಿಸಿದರು.

# ಪಿಪಿಪಿ ವೈದ್ಯಕೀಯ ಕಾಲೇಜಿಗೆ ವಿರೋಧ




**ದೇವರಹಿಪ್ಪರಗಿ :** ವಿಜಯಪುರ ಜಿಲ್ಲೆಯ ಸರ್ಕಾರಿ ವೈದ್ಯಕೀಯ ಕಾಲೇಜಿನ ಉದ್ದೇಶಿತ ಪಿಪಿಪಿ ಮಾದರಿ ಕೈಬಿಟ್ಟು, ಸರ್ಕಾರಿ ಕಾಲೇಜು ಆರಂಭಿಸಬೇಕು ಹಾಗೂ ಜಿಲ್ಲಾ ಸರ್ಕಾರಿ ಆಸ್ಪತ್ರೆ ಉಳಿಸುವಂತೆ ಆಗ್ರಹಿಸಿ ದೇವರಹಿಪ್ಪರಗಿ ತಾಲ್ಲೂಕಿನ ವಿವಿಧ ಸಂಘ, ಸಂಸ್ಥೆಗಳ ಪದಾಧಿಕಾರಿಗಳು ಪ್ರತಿಭಟನಾ ಮೆರವಣಿಗೆ ನಡೆಸಿ ನಂತರ ತಹಶೀಲ್ದಾರ್ ಕಾರ್ಯಾಲಯದ ಎದುರು ಪ್ರತಿಭಟಿಸಿ, ತಹಶೀಲ್ದಾರ್ ಪ್ರಕಾಶ ಸಿಂದಗಿ ಅವರಿಗೆ ಮನವಿ ಸಲ್ಲಿಸಿದರು.

ಪಟ್ಟಣದ ಮೊಹರೆ ಹಣಮಂತ್ರಾಯ ವೃತ್ತದಲ್ಲಿ ಗುರುವಾರ ಸಭೆ ಸೇರಿದ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನಾ ಹೋರಾಟ ಸಮಿತಿ, ಸ್ಪಂದನಾ ತಾಲ್ಲೂಕು ಮಹಿಳಾ ಸ್ವಸಹಾಯ ಸಂಘಗಳ ಒಕ್ಕೂಟ, ಜನವೇದಿಕೆ, ಮಾನವ ಬಂಧುತ್ವ ವೇದಿಕೆಯ ಪದಾಧಿಕಾರಿಗಳು ಜಿಲ್ಲೆಯ ಸರ್ಕಾರಿ ವೈದ್ಯಕೀಯ ಕಾಲೇಜಿನ ಉದ್ದೇಶಿತ ಪಿಪಿಪಿ ಮಾದರಿ ಕೈಬಿಡಲು ಒತ್ತಾಯಿಸಿ ಮೆರವಣಿಗೆ ಹೊರಟು ರಾಷ್ಟ್ರೀಯ ಹೆದ್ದಾರಿಯಲ್ಲಿನ ಅಂಬೇಡ್ಕರ್ ವೃತ್ತದ ಮೂಲಕ ಇಂಡಿ ರಸ್ತೆಯಲ್ಲಿನ ತಹಶೀಲ್ದಾರ್ ಕಾರ್ಯಾಲಯ ತಲುಪಿ ಧರಣಿ ಕುಳಿತರು.

ಹೋರಾಟ ಸಮಿತಿಯ ಪ್ರಕಾಶ ಗುಡಿಮನಿ ಮಾತನಾಡಿ, ‘ಸರ್ಕಾರ ಪಿಪಿಪಿ ಮಾದರಿಯ ವೈದ್ಯಕೀಯ ಕಾಲೇಜು ಆರಂಭಿಸುವ ಹುನ್ನಾರದಲ್ಲಿದೆ.

ಅಷ್ಟೇ ಅಲ್ಲ ಜಿಲ್ಲೆಯ ಶಾಸಕರೊಬ್ಬರು 500 ಕೋಟಿ ಬಂಡವಾಳ ಹೂಡುವುದಾಗಿ ಸದನದಲ್ಲೇ ಹೇಳಿದ್ದಾರೆ. ಅವರಿಗೆ ಖಾಸಗಿ ಕಾಲೇಜು ಬೇಕೆನಿಸಿದರೆ ನಾಲ್ಕಾರು ಖಾಸಗಿ ಕಾಲೇಜುಗಳನ್ನು ಆರಂಭಿಸಲಿ. ಆದ–ರೆ ಪಿಪಿಪಿ ಹೆಸರಲ್ಲಿ ಸರ್ಕಾರಿ ಕಾಲೇಜು ಅಪಹರಿಸುವುದನ್ನು ಇಡೀ ಜಿಲ್ಲೆಯ ಜನತೆ ಖಂಡಿಸುತ್ತದೆ’ ಎಂದರು.

ಕರ್ನಾಟಕ ಜನಾರೋಗ್ಯ ಚಳವಳಿಯ ಟೀನಾ ಝೇವಿಯರ್, ರೈತಸಂಘದ ರೇಣುಕಾ ಪಾಟೀಲ, ಡಿಎಸ್‌ಎಸ್ ಸಂಚಾಲಕ ರಾವುತ ತಳಕೇರಿ, ಶ್ರೀನಾಥ ಪೂಜಾರಿ, ಅಕ್ರಮ್ ಮಸಾಲ್ಕರ್ ಮಾತನಾಡಿದರು. ಬಿಜೆಪಿ ಹಿಂದುಳಿದ ಮೋರ್ಚಾ ಪದಾಧಿಕಾರಿ ರಮೇಶ ಈಳಗೇರ, ಜೆಡಿಎಸ್ ಯುವಘಟಕದ ಅಧ್ಯಕ್ಷ ಮುನೀರ್ ಅಹ್ಮದ್ ಮಳಖೇಡ, ರೈತಸಂಘದ ಶಾಂತಪ್ಪ ದೇವೂರ, ಹೃದಯಮೇರಿ, ಶಾಂತಾ ದೇಗಿನಾಳ, ರಶ್ಮೀ ಗುತ್ತೇದಾರ, ಲಕ್ಷ್ಮಿ ಇಂಚಗೇರಿ, ಭಾಗ್ಯ ಇಂಡಿಮಠ, ಪೂಜಾ ತೊರವಿ, ಸುರೇಶ ಜೆ.ಬಿ, ಇಮಾಮ್ ಮುಲ್ಲಾ, ಅಪ್ಪು ಮುಲ್ಲಾ ಇದ್ದರು.

